ಅಂಬಿಗರ ಚೌಡಯ್ಯ

ಎಸ್.ಜೆ.ಸಿದ್ಧರಾಮಯ್ಯ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಅಂಬಿಗರ ಚೌಡಯ್ಯ

ಎಸ್. ಜಿ. ಸಿದ್ಧರಾಮಯ್ಯ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨

AMBIGARA CHOWDAIAH
—Written by S. G. Siddaramaiah
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii+48

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು-೫೬೦೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆ ಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸು ವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆ ಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿ ಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆ ಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ-ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಅದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ, ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಎಸ್. ಜಿ. ಸಿದ್ಧರಾಮಯ್ಯ

ಅಂಬಿಗರ ಚೌಡಯ್ಯ

ವಚನ ಯುಗದ ವಿಶೇಷ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೇ ಶತಮಾನ ಒಂದು ವಿಶಿಷ್ಟಯುಗ. ಕರ್ನಾಟಕದ ಜನಸಾಮಾನ್ಯರ ಬದುಕಿನಲ್ಲಿ ಮಹತ್ತರ ಬದಲಾವಣೆಯನ್ನು ಬೀರಿದ ಕಾಲಘಟ್ಟ ಇದು. ಹಿಂದೆಂದೂ ಇಂಥ ಬದಲಾವಣೆ ಭಾರತದ ಯಾವ ಮೂಲೆಯಲ್ಲೂ ನಡೆದ ದಾಖಲಾತಿ ಇಲ್ಲ.

ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ತಿರುಗಿಬಿದ್ದು ಮಾನವೀಯ ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನು ಗೌರವಿಸುತ್ತ ಬದಲಾವಣೆಗೆ ಹಾತೊರೆದ ಚಳವಳಿ ಇದು. ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲರನ್ನೂ ಒಂದೇ ಭಾವದಲ್ಲಿ ಕಾಣುವ ಬಸವಣ್ಣನವರ ಮಾನವೀಯ ಹಂಬಲಿಕೆಗಳ ಫಲರೂಪಿಯಾದ ಈ ಹೋರಾಟ ತನ್ನ ಗರ್ಭದಲ್ಲಿ ಹಲವು ಗೊಂದಲ ವೈರುಧ್ಯ ಸಣ್ಣತನ ಅವಮಾನಗಳ ಜತೆಗೆ ಪ್ರೀತಿ ವಾತ್ಸಲ್ಯ ಸಹಾನುಭೂತಿ ಸಮಾನತೆ ಇತ್ಯಾದಿ ಮಾನವೀಯ ಕಾಮನೆಗಳನ್ನು ಹುದುಗಿಸಿಕೊಂಡಿದೆ. ಕಾರಣ ಈ ಆಂದೋಲನದಲ್ಲಿ ಭಾಗವಹಿಸಿದವರೆಲ್ಲ ಭಾರತದ ವರ್ಣ ವ್ಯವಸ್ಥೆಯ ಜಾತಿ ಗೋಡೆಗಳ ನಡುವಿನಿಂದ ಮೊದಲಬಾರಿಗೆ ಹೊರಬಂದು, ಮನುಷ್ಯ ಸಂಬಂಧಗಳ ಬೆಳಕಿಗೆ ತೆರೆದುಕೊಳ್ಳತೊಡಗಿದವರು. ಇಂಥ ಬೆಳಕಿನಲ್ಲಿ ರುಚಿ-ವಾಸನೆ, ಮಡಿ-ಮೈಲಿಗೆ, ಆಚಾರ-ವಿಚಾರ, ಆಸೆ-ಆಮಿಷ, ಗಂಡು-ಹೆಣ್ಣು, ಮೇಲು-ಕೀಳು, ಭಾಷೆ-ಭಾವನೆ, ಸಂಕೋಚ-

ವಿಸ್ತಾರ ಇತ್ಯಾದಿ ಅಂಶಗಳು ಪರಸ್ಪರ ಢಿಕ್ಕಿ ಹೊಡೆದಿರುವುದು ಸಹಜ. ಆದರೆ ಆ ಚಳವಳಿಯಲ್ಲಿ ಇವೆಲ್ಲವನ್ನೂ ಸಾವರಿಸಿಕೊಂಡು ಬೆಳೆಯುವ ಮನೋಧರ್ಮ ವ್ಯಕ್ತಿನೆಲೆಯಿಂದ ಸಮಷ್ಟಿಯ ವ್ಯಾಪ್ತಿಯವರೆಗೆ ಹಬ್ಬಿಹರಿದಿದ್ದ ಜೀವ ಶಕ್ತಿಯಾಗಿತ್ತು. ಇದಕ್ಕೆ ಅನುಭವ ಮಂಟಪ ಮಹಾಮನೆಗಳ ಕ್ರಿಯೆ ಮತ್ತು ಸಂವಾದಾತ್ಮಕ ವಚನಗಳು ಉತ್ತಮ ಉದಾಹರಣೆಗಳಾಗುತ್ತವೆ.

ಈ ಆಂದೋಲನ ಪಡೆದ ಅತ್ಯುಚ್ಚ ಹಾಗೂ ಅರ್ಥಪೂರ್ಣ ನಡೆ ಎಂದರೆ ಪ್ರತಿಲೋಮ ವಿವಾಹ. ಈ ವಿವಾಹದ ಪರಿಣಾಮ ಕಾರಣಗಳು ವರ್ಣ ವ್ಯವಸ್ಥೆಯ ಕೊಳಕು ಕ್ರೌರ್ಯಗಳನ್ನು ತೋರುತ್ತವೆ. ಭಾರತದ ಮೂಲಭೂತವಾದಿ ಧಾರ್ಮಿಕ ವ್ಯವಸ್ಥೆಯನ್ನು ಆದಿಯಿಂದಲೂ ಪೋಷಿಸಿಕೊಂಡು ಬಂದ ರಾಜಕೀಯ ಶಕ್ತಿ ಇಲ್ಲಿಯೂ ಈ ಚಳವಳಿಗೆ ದಮನಕಾರಿಯಾಗಿ ವರ್ತಿಸಿರುವುದು ಐತಿಹಾಸಿಕ ಸತ್ಯ.

ಶ್ರಮಿಕ ನೆಲೆಯ ದನಿ ವಿಶೇಷತೆ :

ವಚನ ಚಳವಳಿಯ ಒಂದು ಮಹತ್ವಪೂರ್ಣ ವಿಶೇಷವೆಂದರೆ ಅದುವರೆಗೂ ಬಾಯಿ ಇದ್ದೂ ಇಲ್ಲದಂತಾಗಿದ್ದ ಕೆಳವರ್ಗದ ಅಸಂಖ್ಯ ಜೀವಗಳು ಮಾತನಾಡತೊಡಗಿದವು. ಸತ್ವ ಇದ್ದೂ ಪ್ರಕಟಗೊಳಿಸಿಕೊಳ್ಳಲಾಗದ ಆಲೋಚನೆಗಳಿದ್ದೂ ಹಂಚಿಕೊಳ್ಳಲಾಗದ ಸ್ಥಿತಿಯಲ್ಲಿದ್ದ ಅಪಾರ ಪ್ರತಿಭೆಗಳು ಅನಾವರಣಗೊಳ್ಳತೊಡಗಿದವು. ಈ ದನಿಗಳು ಅಪಾರವಾದಷ್ಟೇ ವೈವಿಧ್ಯತೆಯ ವಿಶಿಷ್ಟತೆಯನ್ನು ಕಂಗೊಳಿಸಿವೆ.

ವೀರಶೈವ ಧರ್ಮವನ್ನು ಒಪ್ಪಿ ಆಚರಿಸಹೋರಟ ಕೆಳಜಾತಿಯ ವಚನಕಾರರ ಒಂದು ವಿಶೇಷವೆಂದರೆ, ತಾವು ಕೈಕೊಂಡಿದ್ದ ಕಾಯಕವನ್ನೇ ತಮ್ಮ ಆಧ್ಯಾತ್ಮಿಕ ಚಿಂತನೆಯ ಪ್ರಕಟಣೆಗೆ ಮಾಧ್ಯಮವಾಗಿಸಿಕೊಂಡಿರುವುದು. ಈ ಪ್ರಕಟಣೆ ಎರಡು ರೀತಿಯಲ್ಲಿ ವ್ಯಕ್ತಗೊಂಡಿದೆ.

ಒಂದು ಪಡೆಯ ಮುಖೇನ: ಕಾಯಕವೇ ಕೈಲಾಸವೆಂದು ಸಾರಿದ ತತ್ವವನ್ನು ಬದುಕಾಗಿಸಿ ಆಚರಿಸುವುದರಲ್ಲಿ. ಹೀಗೆ ಬಾಳಿದ್ದರಿಂದ ಅವರ ಭಕ್ತಿ ಗುಪ್ತವಾದದ್ದೇ ಹೆಚ್ಚು. ಈ ಗುಪ್ತಭಕ್ತಿ ಪ್ರಕಟವಾಗಲು ಅವರು ಎಂದೂ ಇಚ್ಛಿಸಿದವರಲ್ಲ. ಅದು ಅವರಿಗೆ ಬೇಕಿಲ್ಲದ ಹೊನ್ನ ಶೂಲ. ಈ ಗುಪ್ತಭಕ್ತರು ತಮ್ಮ ಶ್ರದ್ಧೆ ಪ್ರಾಮಾಣಿಕತೆಗಳಿಂದ ಅಂತರಂಗ ಬಹಿರಂಗದ ಪಾರದರ್ಶಕತ್ವದಲ್ಲಿ ತಮ್ಮ ವ್ಯಕ್ತಿತ್ವವನ್ನು ಬೆಳಗಿಸಿಕೊಳ್ಳುತ್ತಿದ್ದರು. ಈ ಬೆಳಗಿಸಲ್ಲಿ ಕಾಯಕದ ಪಾತ್ರ ಅಪಾರ. ಕಾಯಕ ಯಾವುದಾದರೂ ಅದು ಮಾನವಕಲ್ಯಾಣಕ್ಕೆ ಸಾಧಕವಾದದ್ದೂ ಶ್ರದ್ಧೆ ಪ್ರಾಮಾಣಿಕತೆಗಳನ್ನು ತನ್ನ ಗತಿಶೀಲತೆಯಾಗಿಸಿಕೊಂಡದ್ದೂ ಆಗಿರಬೇಕು. ಇದರಿಂದಾಗಿ ಕಾಯಕಜೀವಿಯ ವ್ಯಕ್ತಿತ್ವದ ಹಿರಿಮೆ ಗರಿಮೆಗಳು ಬೆಳೆಯುತ್ತಿದ್ದವು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಆಗಿಹೋಗಿರುವ ಭಕ್ತರು ಭಕ್ತಿಯನ್ನು ಮೆರೆಯುತ್ತಿದ್ದ ರೀತಿಗೂ ವಚನಕಾರರು ಈ ರೀತಿ ತಮ್ಮ ಕಾಯಕದ ಒಡಲಲ್ಲಿ ಭಕ್ತಿಯನ್ನು ಬೆಳೆಸುತ್ತಿದ್ದ ರೀತಿಗೂ ಮೂಲಭೂತ ವ್ಯತ್ಯಾಸಗಳಿವೆ: ಈ ವ್ಯತ್ಯಾಸ ಜೀವನ ಶೈಲಿಗೆ ಸಂಬಂಧಿಸಿದ್ದು.

ಇನ್ನು ಪ್ರಕಟಣೆಯ ಎರಡನೆಯ ವಿಧಾನ: ಈ ಭಕ್ತರಲ್ಲಿ ಕೆಲವರು ಮಾಡಿರುವ ವಚನ ಸೃಷ್ಟಿ. ಇವರು ತಮ್ಮ ಕಾಯಕದ ಪರಿಭಾಷೆಗಳನ್ನು ಬಳಸಿಕೊಂಡು ಕಾಯಕದ ವಿಧಿವಿಧಾನಗಳನ್ನು ವಿವರಿಸುತ್ತಾ ಅದರ ಜತೆ ಆಧ್ಯಾತ್ಮ ಚಿಂತನೆಯನ್ನು ಶಿವಪರ ಭಾವನೆಯನ್ನು ಪ್ರಕಟಿಸುತ್ತಿದ್ದರು. ಇಂಥ ವಚನಗಳ ಅಂತರ್ಯದಲ್ಲಿಯೂ ಕಾಯಕವನ್ನು ಪೂಜೆಯಾಗಿಸಿಕೊಂಡಿರುವ ಕಾಯಕ ಗೌರವ ಭಾವ ಪ್ರಧಾನವಾಗಿ ಕಾಣುತ್ತದೆಯೇ ಹೊರತು, ಕಾಯಕದಿಂದ ಆಚೆಗೆ ಹೋದಂತೆ ಆ ಚಿಂತನೆ ಉಳಿಯುವುದಿಲ್ಲ. ಹೀಗಾಗಿ ಈ ಅಭಿವ್ಯಕ್ತಿ ಶ್ರಮಿಕನೆಲೆಯದು, ಜನಪರವಾದದ್ದು. ಇದರ ಅಭಿವ್ಯಕ್ತಿ ವಿಧಾನ

ಕೂಡ ವಿಶಿಷ್ಟವಾದವು. ಈ ವಿಶಿಷ್ಟತೆ ವಚನಕಾರನ ವ್ಯಕ್ತಿ ವಿಶಿಷ್ಟತೆಯನ್ನು ಜೀವನದ್ರವ್ಯವಾಗಿಸಿಕೊಂಡಿರುವುದು.

ಕೆಲವು ವಚನಕಾರರಲ್ಲಿ ಮೇಲಿನ ಈ ಎರಡೂ ರೀತಿಗಳು ಒಂದರೊಳಗೊಂದು ಅಭಿನ್ನವಾಗಿರುವ ಸ್ವರೂಪದವು. ಅಂಬಿಗರ ಚೌಡಯ್ಯ ಇಂಥ ಅಭಿವ್ಯಕ್ತಿ ಪರಂಪರೆಯನ್ನು ಬೆಳೆಸಿದ ಶರಣರ ಸಾಲಿಗೆ ಸೇರಿದವನು. ದೋಣಿ ನಡೆಸುವ ಕಾಯಕವನ್ನು ಕೈಗೊಂಡ ವೀರಶೈವ ಧರ್ಮವನ್ನು ಜೀವನಶೈಲಿಯಾಗಿಸಿಕೊಂಡಿದ್ದ ಚೌಡಯ್ಯ ನೇರ ನುಡಿಯ ನಿಷ್ಠುರವಾದಿ. ಅವನ ವಚನಗಳಲ್ಲಿ ಅವನ ಸ್ವಭಾವ ಪಾರದರ್ಶಕವಾಗಿದೆ. ಸಿದ್ಧಾಂತ ರೂಪದ ಹೇಳಿಕೆಗಳಿಗಿಂತ, ಅನುಭಾವಿಕ ನೆಲೆಯ ಬೆಡಗಿನ ನುಡಿಗಳಿಗಿಂತ, ಸಿಟ್ಟು ಸೆಡವಿನ ನೆಲೆಯ ಖಂಡನೆ ತಿರಸ್ಕಾರ ಕಟು ವಿಮರ್ಶೆಯ ನೇರ ಮಾತುಗಳು ಅವನ ವಚನಗಳ ಶರೀರ ಸತ್ವ.

ಚೌಡಯ್ಯನ ಕಾಲ ವಿಚಾರ

ಅಂಬಿಗರ ಚೌಡಯ್ಯನು ೧೨ನೇ ಶತಮಾನಕ್ಕೆ ಸೇರಿದ ಓರ್ವ ಶ್ರೇಷ್ಠ ವಚನಕಾರನಾಗಿದ್ದರೂ ಅವನನ್ನು ೧೩ನೇ ಶತಮಾನದವನೆಂದು ಹೇಳುವ ಒಂದು ವಾದವೂ ಇದೆ. ಇಂದಿನ ಧಾರವಾಡ ಜಿಲ್ಲೆಯ ಪಶ್ಚಿಮಾಭಿಮುಖಿಯಾಗಿರುವ ತುಂಗಭದ್ರಾ ನದಿಯ ದಡದಲ್ಲಿರುವ ಶಿವಪುರವು (ಈಗಿನ ಚೌಡದಾನಪುರ) ಅವನ ಜನ್ಮಸ್ಥಳವೆಂದೂ ಶಿವ ದೇವರ ಗಾಢ ಪ್ರಭಾವಕ್ಕೆ ಒಳಗಾದ ಅವನು ಶಿವಪುರವನ್ನು ಅವರಿಗೆ ದಾನವಾಗಿ ಕೊಟ್ಟ ಕಾರಣ ಅಂದಿನಿಂದ ಇದು ಚೌಡಯ್ಯದಾನಪುರ ಎಂದು ಹೆಸರು ಪಡೆಯಿತೆಂದೂ ಹೇಳಲಾಗಿದೆ. ಈ ಅಭಿಪ್ರಾಯಗಳಿಗೆ ಆಧಾರ ಚೌಡದಾನಪುರ, ಮೈಲಾರ, ಕಿರೆ ಮಲ್ಲಾಪುರ ಇತ್ಯಾದಿಗಳ ಶಾಸನಗಳು ಹಾಗೂ ಇತ್ತೀಚಿನದಾದ 'ಶಿವದೇವ ವಿಜಯ' ಎಂಬ ಕೃತಿ. ಚೌಡದಾನಪುರ, ಶಾಸನದಲ್ಲಿ ಬರುವ ಮಾಣಿಕೆ ನಾಯಕನೇ ಅಂಬೆನಾಯಕನೆಂದೂ.

ಈತನೇ ಅಂಬಿಗರ ಚೌಡಯ್ಯನೆಂದೂ ವಾದಿಸಲಾಗಿದೆ. ಮೈಲಾರ ಶಾಸನದಲ್ಲಿ ಮುಕ್ತಿನಾಥ ಲಿಂಗದಲ್ಲಿ ಉದ್ಭವಿಸಿದ ಶಿವ ದೇವರು ಕುರುಪತ್ತಿ ನಂದೀಶ್ವರ, ಮೈಲಾರಲಿಂಗ ಹೊನ್ನಮ್ಮದೇವಿ ಶರಣ ಚೌಡಯ್ಯ ಮೊದಲಾದವರಿಗೆ ಶಿವಲಿಂಗ ಧಾರಣೆ, ಶಿವ ಧರ್ಮೋಪದೇಶಗಳನ್ನು ಮಾಡಿದರೆಂದು ಹೇಳಲಾಗಿದೆ. ಕೆರೆ ಮಲ್ಲಾಪುರ ಶಾಸನದಲ್ಲಿಯೂ ಶರಣ ಚೌಡಯ್ಯನ ಉಲ್ಲೇಖ ಬಂದಿದೆ. ಈ ಎಲ್ಲ ಶಾಸನಗಳಲ್ಲಿ ಬರುವ ಚೌಡಯ್ಯ ಅಂಬಿಗರ ಚೌಡಯ್ಯನೇ ಎಂಬುದಕ್ಕೆ ಗಟ್ಟಿಯಾದ ಆಧಾರ ಸಾಲದು. ಅಂಬಿ ನಾಯಕನೇ ಅಂಬಿಗರ ಚೌಡಯ್ಯನೆಂದು ವಾದಿಸು ವಲ್ಲಿಯೂ ಸತ್ಯಾಂಶ ತೋರದು. ದೋಣಿ ನಡೆಸುವ ಕಾಯಕದ ಒಬ್ಬ ಭಕ್ತ ತನ್ನ ಗುರುವಿಗೆ ತನ್ನ ಊರನ್ನೇ ದಾನ ನೀಡಿದನೆಂಬುದನ್ನು ನಂಬಲಾಗದು. ಊರನ್ನು ದಾನ ಕೊಡಲು ಇವನಿಗೆ ಅಧಿಕಾರ ವಾದರೂ ಏನಿತ್ತು ? ಈ ಸಂದೇಹಕ್ಕೆ ಸೂಕ್ತ ಪರಿಹಾರ ಸಿಗುತ್ತಿಲ್ಲ.ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಲಾಗಿರುವ ಶಾಸನಗಳಲ್ಲಿ ಬರುವ ಚೌಡಯ್ಯ ಅಂಬಿಗರ ಚೌಡಯ್ಯನಿಗಿಂತ ಭಿನ್ನನೆಂದು ಹೇಳಬಹುದು" (ಅಂಬಿಗರ ಚೌಡಯ್ಯನ ವಚನಗಳು– ಸಂ. ಡಾ॥ ಎಸ್. ವಿದ್ಯಾಶಂಕರ)

ಚೆನ್ನಬಸವಣ್ಣ ತನ್ನ ವಚನವೊಂದರಲ್ಲಿ (ವ ೧೪೮೮) ಕಾಳಯ್ಯ ಚೌಡಯ್ಯ ಕೋಲಶಾಂತಯ್ಯ ಮೊಗವಾಡದ ಕೇಶಿರಾಜಯ್ಯ ಖಂಡನೆಯ ಬೊಮ್ಮಣ್ಣ, ಏಂಡಮಲ್ಲಿನಾಥ ಹಡಪದಪ್ಪಣ್ಣ ಮಡಿವಾಳ ಮಾಚಯ್ಯ ಅಕ್ಕ ನಾಗಾಯಿಗಳು ಸಹಿತ ಇವರೆಲ್ಲರೂ ಸಂಗನ ಬಸವಣ್ಣನ ಬಯಲ ಕೂಡಿದರು' ಎಂದಿರುವನು. ಇಲ್ಲಿ ಹೇಳಲಾಗಿರುವ ಚೌಡಯ್ಯನು ಅಂಬಿಗರ ಚೌಡಯ್ಯನೇ ಆಗಿರಬಹುದು. ಅವನು ತನ್ನ ವಚನಗಳಲ್ಲಿ ಕಂಬಾವಿ ಭೋಗಣ್ಣ, ಬಸವಣ್ಣ, ಪಡಿಹಾರಿ ಉತ್ತಣ್ಣ, ಮರುಳ ಶಂಕರದೇವ, ಹಲಾಯ್ಯ ಮೊದಲಾದ ೧೨ನೇ ಶತಮಾನದ ಶಿವಶರಣರನ್ನು ನೆನೆದಿರುವನು. ಗುಮ್ಮಳಾಪುರದ ಸಿದ್ಧಲಿಂಗ ದೇವರ 'ಶೂನ್ಯ ಸಂಪಾದನೆ'ಯ ಸಿದ್ಧರಾಮನ ಗುರುಕರುಣೆಯ

ಪ್ರಸಂಗದಲ್ಲಿ ಇತರ ಶರಣರ ಕೂಡ ಅಂಬಿಗರ ಚೌಡಯ್ಯನೂ ತನ್ನ ಆಲೋಚನೆಗಳನು ಹೇಳಿರುವುದು; ಮಲ್ಲಿಕಾರ್ಜುನ ಪಂಡಿತಾರಾಧ್ಯನು (ಸು. ೧೧೮೦) ತನ್ನ 'ಗಣ ಸಹಸ್ರ ನಾಮ'ದಲ್ಲಿ ಬಸವಾದಿ ಶಿವಶರಣರ ಹೆಸರಿನ ಜೊತೆಗೆ ಚೌಡಯ್ಯನ ಹೆಸರನ್ನೂ ಉಲ್ಲೇಖಿಸಿರುವುದು, ಪ್ರಭುವು ಚೌಡಯ್ಯನಿಗೆ ಬೋಧಿಸಿದನೆಂದು ಹೇಳಲಾಗುವ ವಚನಗಳು ದೊರೆಯುತ್ತಿದ್ದು ಇವು ನಿಸ್ಸಂಶಯವಾಗಿ ಪ್ರಭುವಿನ ವಚನಗಳಾಗಿರು ವುದು–ಈ ಅಂಶಗಳ ಹಿನ್ನೆಲೆಯಲ್ಲಿ ಪರಿಭಾವಿಸಿದಾಗ ಅಂಬಿಗರ ಚೌಡಯ್ಯನು ೧೨ನೇ ಶತಮಾನದವನೆಂದು ಹೇಳಬಹುದು. ಹನ್ನೆರಡನೇ ಶತಮಾನದ ಇಷ್ಟಲಿಂಗದ ಮಹತ್ವ, ಆ ಕಾಲದ ಕೆಲವು ಸಾಮಾಜಿಕ ಆಚರಣೆಗಳು, ನಡೆ–ನುಡಿಯಲ್ಲಿ ಸಮಾನ ಗುಣವಿಲ್ಲದ ಭಕ್ತರ, ವಿರಕ್ತರ ಆಚರಣೆಗಳಲ್ಲಿನ ಹುಸಿತನದ ಬಗೆಗಿನ ಕಟುವಾದ ಟೀಕೆ-ಈ ಕೆಲವು ಆಂತರಿಕ ಆಧಾರಗಳ ಮೇಲೂ ಅಂಬಿಗರ ಚೌಡಯ್ಯನು ೧೨ನೇ ಶತ ಮಾನದ ಶಿವಶರಣನೆಂದು ಖಚಿತವಾಗಿ ಹೇಳಬಹುದು." (ಅಂಬಿಗರ ಚೌಡಯ್ಯನ ವಚನಗಳು ಸಂ. ಡಾ॥ ವಿದ್ಯಾಶಂಕರ)

ಕಾಯಕ–ಕುಲದ ಹಿರಿಮೆ

ಅಂಬಿಗರ ಚೌಡಯ್ಯ ಒಬ್ಬ ಕೆಳವರ್ಗದ ಕಾಯಕ ಜೀವಿ ನಾವಿನ ಕಾರ. ಇವನ ಆತ್ಮಾಭಿಮಾನ ಅಪಾರವಾದುದು. ವರ್ಣವ್ಯವಸ್ಥೆ ಯಲ್ಲಿ ನೋವುಂಡ ನೆಲೆ ಮೂಲಕ್ಕೆ ಸೇರಿದವನಾದ ಚೌಡಯ್ಯ ತನ್ನ ಕುಲ ಮತ್ತು ಕಾಯಕವನ್ನು ಹೆಸರಿಸಿದಂತೆ ಅಣಕದ ಮಾತಾಡುತ್ತಿದ್ದ ವರಿಗೆ-

ಅಂಬಿಗ ಅಂಬಿಗ ಎಂದು ಕುಂದು ನುಡಿಯದಿರು
ನಂಬಿದರೆ ಒಂದೆ ಹುಟ್ಟಲಿ ಕಡೆಯ
ಹಾಯಿಸುವನಂಬಿಗರ ಚೌಡಯ್ಯ

–ಎಂದು ಆತ್ಮಾಭಿಮಾನದಿಂದ ಸವಾಲಿನ ರೀತಿಯಲ್ಲಿ ವ್ಯಕ್ತಿತ್ವದ ಔನ್ನತ್ಯವನ್ನು ಮೆರೆದಿದ್ದಾನೆ. ಇದು ಆತ್ಮಪ್ರತಿಷ್ಠೆಯ ಮಾತಾಗದೆ ಆತ್ಮಗೌರವದ ಅನಿವಾರ್ಯ ದನಿಯಾಗಿದೆ. 'ಒಂದೆ ಹುಟ್ಟಲಿ' ಎಂಬ ಪದ ಶ್ಲೇಷಾರ್ಥದಿಂದ ಕೂಡಿದೆ. ಕಾಯಕದ ಪರಿಣತಿ ಮತ್ತು ವ್ಯಕ್ತಿತ್ವದ ಔನ್ನತ್ಯ ಈ ಎರಡೂ ನೆಲೆಗೆ ಸೇರಿದ ಅರ್ಥಧ್ವನಿಯನ್ನು ಸುಂದರವಾಗಿ ವ್ಯಂಜಿಸಿದೆ. ವಚನದ ಸಾಲುಗಳು ಪ್ರತಿಕ್ರಿಯಾತ್ಮಕ ದನಿಯಂತೆ ಮೊಳಗಿದರೂ ಅವರ ಒಡಲಲ್ಲಿ ಅನುರಣಿತವಾಗುವ ನೋವಿನ ಅನುಭವ ಪ್ರತಿಭಟನೆಯ ನೈತಿಕ ಸ್ಪರ್ಶಪಡೆದು ಶ್ರೇಣೀಕೃತ ಸಾಂಪ್ರದಾಯಿಕ ದೃಷ್ಟಿಯನ್ನು ಪ್ರಶ್ನಿಸಿ ಸಿಡಿದಿದೆ.

ತಡಿ ನೆಲೆಯಿಲ್ಲದ ಮಹಾನದಿಯಲ್ಲಿ
ಒಡಲಿಲ್ಲದ ಅಂಬಿಗ ಬಂದಿದ್ದಾನೆ
ಹಿಡಿವ ಬಿಡುವ ಮನವ ಬೆಲೆಗೊಟ್ಟೊಡೆ
ಕಡೆಗಾಣಿಸಿ ಹಾಯಿಸುವೆ ಹೊಳೆಯನು
ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತ–
ನಂಬಿಗ ಚೌಡಯ್ಯ

ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವ ಇವನ ಆತ್ಮವಿಶ್ವಾಸ ಅದಮ್ಯವಾದುದು. ಈ ಆತ್ಮವಿಶ್ವಾಸ ಒಣ ಅಹಂಕಾರವಲ್ಲ, ತನ್ನ ತಾನರಿದ ಪರಿಪಕ್ವ ಭಾವ. ಈ ಭಾವ ನಲಕ್ಕಂಟಿ ಮಾತನಾಡುವ ಸಾಧನಾಶೀಲ ನೆಲೆಯದೇ ಹೊರತು ನೆಲದಾಚೆಯ ಮತ್ತಾವುದೋ ಭ್ರಮೆಗೆ ಸಿಲುಕಿದ್ದಲ್ಲ.

ಕಂಗಳ ನಾಮ ಹರುಗುಲವಾಗಿ
ನೋಡುವ ದೃಷ್ಟಿ ಅಂಬಿಗನಾಗಿ
ಕರಣೇಂದ್ರಿಯಾವೆಂಬ ಬಹುಜನಂಗಳು ಕೂಡಿ

ಆಸೆಯೆಂಬ ಹೊಳೆಯ ದಾಟುವುದಕ್ಕೆ ಹುಟ್ಟು ಕಾಣದೆ
ಹರಗೋಲು ಈಜಿ ಉಳಿಯಿತ್ತೆಂದನಂಬಿಗ ಚೌಡಯ್ಯ.

ಈ ವಚನದಲ್ಲಿ ಕಾಯಕದ ವಿವರಗಳನ್ನು ಬದುಕಿನ ಕಡೆ ಹಾಯಿಸುವ ಚಿಂತನೆಗೆ ಸಮೀಕರಿಸಿ ಕೊಂಡಿರುವುದು ವಿನೂತನವಾಗಿದೆ. ಆದರೆ ಕಡೆ ಹಾಯುವ ಸಂತೋಷಕ್ಕಿಂತ ಕಡೆ ಹಾಯಲು ಅಗತ್ಯವಾಗಿರುವ 'ಹುಟ್ಟು' ಕಾಣದೆ ಉಳಿದ ಸ್ಥಿತಿಯಲ್ಲಿ ವಚನದ ದನಿ ನಿಲ್ಲುತ್ತದೆ. ಇದು ಆಸೆಯ ಆವೇಶದಲ್ಲಿ ಸುತ್ತುವ ಸುತ್ತಲಿನ ಜನರನ್ನು ಕುರಿತ ಮಾತೇ ಹೊರತು ಆತ್ಮ ನಿರೀಕ್ಷೆಯ ನೆಲೆಯಲ್ಲಿ ಮೂಡಿದ ನುಡಿಯಲ್ಲ.

ಮೇಲಿನ ಮೂರೂ ವಚನಗಳ ಅಂತರ್ಯದಲ್ಲಿ ಆತ್ಮಾಭಿಮಾನದ ವೈಭವ ಕಾಣುತ್ತಿದೆಯೇ ಹೊರತು ಆತ್ಮವಿಮರ್ಶೆಯ ಅನುಸಂಧಾನ ಕಾಣಿಸುವುದಿಲ್ಲ. ಇದು ಇಲ್ಲಿ ಗಮನಾರ್ಹವಾದ ಅಂಶ. ಬಸವಣ್ಣನವರ ವಚನಗಳಲ್ಲಿ ಆತ್ಮವಿಮರ್ಶಾಪರಿ ತೀವ್ರ ಸ್ವರೂಪದಲ್ಲಿ ನಡೆದಿರುವುದನ್ನು ಕಾಣಬಹುದು. ಬಸವಣ್ಣನವರು ತಮ್ಮ ಮನಸ್ಸು ಹರಿವ ಪರಿಯನ್ನು ನಾಯಿ ನರಿಯಕಾದಿಯಾಗಿ ಪಶುಪಕ್ಷಿ ಕ್ರಿಮಿಕೀಟಗಳಿಗೆ ಹೋಲಿಸಿಕೊಂಡು ಆತ್ಮ ವಿಮರ್ಶೆಯ ನಿಕಷದ ಮುಖೇನ ಕರ್ತಾರನ ಕಮ್ಮಟದಲ್ಲಿ ಸಲ್ಲುವ ಬಗೆ ಬೆಳೆಸಿಕೊಂಡಿದ್ದಾರೆ. ಮೇಲುಜಾತಿಯಲ್ಲಿ ಹುಟ್ಟಿದವನಾಗಿ, ಬಿಜ್ಜಳನ ಅರಮನೆಯಲ್ಲಿ ಮಂತ್ರಿಯಾಗಿ, ಚಳುವಳಿಯ ಮುಂಚೂಣಿಯಲ್ಲಿ ನಿಂತ ನಾಯಕನಾಗಿ ಬಸವಣ್ಣ ತನ್ನನ್ನು ಈ ರೀತಿಯ ಆತ್ಮವಿಮರ್ಶೆಗೆ ಒಳಗುಮಾಡಿಕೊಂಡಿರುವುದು ಸಹಜವೆ ಇದೆ. ಮೇಲರಿಮೆಯಿಂದ ಬೀಗುವ ಹುಸಿಭಾವದ ನೆಲೆಯಿಂದ ಬಂದ ಮೇಲ್ಜಾತಿಯ ಯಾವ ವಚನಕಾರನಿಗಾದರೂ ತನ್ನ ಮೇಲರಿಮೆಯನ್ನು ನೀಗಿಕೊಳ್ಳುವುದಕ್ಕೆ, ಬ್ರಾಹ್ಮಣ್ಯವನ್ನು ನೀಗಿಕೊಳ್ಳುವುದಕ್ಕೆ ಈ ರೀತಿಯ ಆತ್ಮವಿಮರ್ಶೆ ಅನಿವಾರ್ಯವೂ ಅಗತ್ಯವೂ ಆಗುತ್ತದೆ. ಆದರೆ ಅವಮಾನ ಹಸಿವುಗಳ ಅಧೋಲೋಕದಿಂದ ಬಂದ ಯಾವ ಕೆಳ ಜಾತಿಯ ವಚನಕಾರನಿಗೂ ಈ ರೀತಿಯ ಆತ್ಮ ವಿಮರ್ಶೆ ಅಷ್ಟು

ಅಗತ್ಯ ಅನಿವಾರ್ಯವಾಗುವುದಿಲ್ಲ. ಕಾರಣ ಇವರು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾಗಿದ್ದ ಸ್ತರಕ್ಕೆ ಸೇರಿದವರೇ ಹೊರತು, ಶೋಷಕವರ್ಗಕ್ಕೆ ಸೇರಿದವರಲ್ಲ. ಹೀಗಾಗಿ ಇವರು ಸಮಾನತೆಯು ಬೆಳಕಿಗೆ ಬಂದರೂ ಅಲ್ಲಿಯೂ ಮತ್ತೆ ಮತ್ತೆ ಈ ಸಮಸ್ಯೆಗಳು ಎದುರಾಗಿ ಕಾಡಿಸುತ್ತವೆ, ನೋಯಿಸುತ್ತವೆ. ಅರಿವಿನ ನೆಲೆಯಲ್ಲಿ ನಿಂತಿರುವ ಇವರಿಗೆ ಈಗ ಈ ಸ್ಥಿತಿ ಭರಿಸಬಾರದ ಎಚ್ಚರವಾಗಿ ಸಿಟ್ಟು ತರಿಸುವುದು ಸಹಜ. ಆದರೆ ಈ ಸಿಟ್ಟು ನೈತಿಕನೆಲೆಯ ಸಿಟ್ಟು. ಒಡಲಾಳದ ಅನುಭವ ಸತ್ಯದ ಸಿಟ್ಟು. ನೋವಿನ ನೆಲೆ ಮೂಲದ ನೈತಿಕ ಸಿಟ್ಟಿನ ಮಾತುಗಳು ನಿಷ್ಠುರವಾಗಿರುತ್ತವೆ, ಅಪ್ರಿಯವಾಗಿ ಕೇಳಿಸುತ್ತವೆ. ಅಂಬಿಗರ ಚೌಡಯ್ಯನ ಹಲವು ವಚನಗಳಲ್ಲಿ ಈ ನೋವು ಸಿಟ್ಟು, ನೈಷ್ಠುರ್ಯ ಆತ್ಮಾಭಿಮಾನದ ಪ್ರತೀಕವಾಗಿ ಅಭಿವ್ಯಕ್ತಿಸಿದೆ. ಜಗತ್ತಿನ ಯಾವುದೇ ಜನಾಂಗದ ಸಂದರ್ಭದಲ್ಲಿಯೇ ಆಗಲಿ ತುಳಿತಕ್ಕೊಳಗಾದಂತೆ ಬಾಳಿದ ಜನರ ಸಿಟ್ಟಿಗೆ ಒಂದು ನೈತಿಕ ಅಧಿಕಾರವಿರುತ್ತದೆ ಎಂಬುದು ವಿದಿತ ಸತ್ಯ.

ಕುರಿ ಕೋಳಿ ಕಿರುಮೀನ ತಿಂಬವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು
ಆತನು ಹರುಗೋಲಾಯಿತ್ತು
ಬೊಕ್ಕಣ ಸಿದಿಕೆ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತಕ್ಕೊಂಡು
ಬಾಯ ಕೊಲ್ಲುವೆನು ಎಂದಾತ ನಮ್ಮ ಅಂಬಿಗರ
ಚೌಡಯ್ಯ

ಈ ಮೇಲಿನ ವಚನ ಕುಲಭೇದವನ್ನು ಎತ್ತಿ ಮಾತಾಡುವವರನ್ನು ಆಚರಿಸುವವರನ್ನು ಕುರಿತು ಆಡಿದ ನುಡಿ. 'ಬುದ್ದಲಿಕೆಯೊಳಗಣ ತುಪ್ಪವ ಶುದ್ಧ ಮಾಡಿ ತಿಂಬ ಗುಜ್ಜ ಹೊಲೆಯರು'–ಎಂಬ ಮಾತನ್ನು ಗಮನಿಸಿ. ಇಲ್ಲಿ ಹುಟ್ಟಿನಿಂದ ಮಾತ್ರ ಹೊಲೆಯ ಜಾತಿಗೆ ಸೇರಿದವರನ್ನು 'ಹೊಲೆಯರು' ಎಂದು ಹೀಗ್ಗಳೆಯುತ್ತಾ ಅವರ ಬೆವರಫಲವನ್ನು ಮಾತ್ರ ಯಾವ ಹೊಲೆತನದ ಗಮನಿಕೆಗೂ ತಂದುಕೊಳ್ಳದೆ ತಿಂದು ತೇಗುವ ಅವಮಾನವೀಯ ನೆಲೆಯಲ್ಲಿ ನಿಂತ ಹಾರುವರನ್ನು 'ಗುಜ್ಜ ಹೊಲೆಯ' ಶಬ್ದ ಬಳಸಿ ತಿರುಗೇಟುಕೊಟ್ಟಂತೆ ಖಂಡಿಸಿರುವುದು ಅರ್ಥ ಪೂರ್ಣವಾಗಿದೆ. ಹುಟ್ಟು ಮತ್ತು ಬದುಕುಗಳ ನಡುವಿನ ಮೌಲ್ಯ ನಿರ್ಣಯದ ವರ್ಣವ್ಯವಸ್ಥೆಯ ಹುನ್ನಾರವನ್ನು ಜಗ್ಗಿಸಿ ಪ್ರಶ್ನಿಸಿದ ಹೊಡೆತ ಇದಾಗಿದೆ. ಮಡಿಮಡಿಯೆಂದು ಅಡಿಗಡಿಗೆ ಹಾರುವ ಜನರನ್ನು ಕುರಿತು ಮೌಲ್ಯ ಪಲ್ಲಟಗೊಳಿಸಿ ಧ್ವಂಸಿಸಿದ ಅರಿವಿನವಿಚಾರ ಇದಾಗಿದೆ. ಇವನ ಈ ವೈಚಾರಿಕ ಆಕ್ರೋಶ (ಕಾಳವ್ವೆಯಂಥ ವಚನ ಕಾರ್ತಿಯನ್ನು ಹೊರತುಪಡಿಸಿ) ಬೇರಾವ ವಚನಕಾರರಲ್ಲಾಗಲಿ ಅಥವಾ ಕೀರ್ತನಕಾರರಲ್ಲಾಗಲೀ ಕಾಣದ ನೈತಿಕ ಅಧಿಕಾರದ ಆಕ್ರೋಶ. ಅವರ ಪ್ರತಿಕ್ರಿಯೆಗಳೇನಿದ್ದರೂ 'ಕೀಳಿಂಗಲ್ಲದೆ ಹಯನು ಕರೆವುದೆ ?' 'ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ ?'-ಎಂಬ ದಾಕ್ಷಿಣ್ಯ ಮುಖದ ಪ್ರಶ್ನೆಗಳು. ಆದರೆ ಚೌಡಯ್ಯನ 'ಉದ್ದನ ಚಮ್ಮಾಳಿಗೆಯ ತಕ್ಕೊಂಡು ಬಾಯ ಕೊಲ್ಲುವ' ಎಚ್ಚರದ ಆತ್ಮಸ್ಥೈರ್ಯದ ಪ್ರತಿಕ್ರಿಯೆ ಆತ್ಮಾಭಿಮಾನದ ಪ್ರತೀಕವಾಗಿದೆ. ಆತ್ಮಾಭಿಮಾನ ಇರುವ ಯಾರೂ ಮಾಡುವ ಪ್ರತಿಭಟನೆ ಇದು. ಕಾರಣ ಈ ಪ್ರತಿಭಟನೆಯ ಗರ್ಭದಲ್ಲಿ ಸಹಸ್ರಾರು ವರ್ಷಗಳ ಅವಮಾನ-ಅತ್ಯಾಚಾರಗಳು ಮುಖಾಮುಖಿ ಯಾಗಿವೆ ಎಂಬುದನ್ನು ಮರೆಯಬಾರದು. ಅಂಬಿಗರ ಚೌಡಯ್ಯನ ಈ ನೈತಿಕ ಆಕ್ರೋಶವ ನೆಲೆಯಲ್ಲಿ ಇತ್ತೀಚಿನ 'ಇಕ್ರಲಾ ವದೀರ್ಲಾ ಇವ್ರ ಚವ್ಡ ಎಬ್ರಲಾ'–ಎನ್ನುವ ದಲಿತ ಕವಿಯ ಬೆಳವಣಿಗೆಯ ಬೇರು

ಕಾಣುತ್ತಿದೆ. ವರ್ಣವ್ಯವಸ್ಥೆಯ ಕಟ್ಟುಬ್ಬಸದಲ್ಲಿ ನರಳುತ್ತಿರುವ ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ನೋವುಂಡ ವರ್ಗದ ಯಾವುದೇ ದನಿ ಮೊದಲಿಗೆ ಎದೆ ತೆರೆದು ನುಡಿಯತೊಡಗಿದಾಗ ಈ ನೈತಿಕಸಿಟ್ಟು ಒಡಲಾಳದ ಕಿಡಿಯಾಗಿ ಮಾಡುವುದು ಸಹಜವಿದೆ.

ಚರಮೂರ್ತಿ ಕಡುಪಾತಕ ಕತ್ತಿ ಹಿಡಿಕರು

ವಚನ ಸಾಹಿತ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರ ಪ್ರತಿ ಕ್ರಿಯಾತ್ಮಕ ದನಿಯಲ್ಲಿ ಆ ಚಳವಳಿ ಎರಡು ದಿಕ್ಕಿನ ಎದುರಾಳಿಗಳನ್ನು ವಿರೋಧಿಸಿ ಹೋರಾಡಿರುವಂತೆ ಕಾಣುತ್ತದೆ. ಒಂದು ವರ್ಣ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟ. ಇನ್ನೊಂದು ವಚನ ಚಳವಳಿ ಯಲ್ಲಿ ಭಾಗವಹಿಸಿದ್ದವರ ನಡುವೆಯೇ ನಡೆಯುತ್ತಿದ್ದ ಆಂತರಿಕ ಹೋರಾಟ. ಈ ಎರಡನೆಯ ಹೋರಾಟ ಹೊರನೋಟಕ್ಕೆ ಕಾಣದ ಆದರೆ ಒಳಹೊಕ್ಕು ಗಮನಿಸಿದಾಗ ವಿಸ್ಮಯ ಹುಟ್ಟಿಸುವಷ್ಟು ಅಗಾಧ ಪ್ರಮಾಣದಲ್ಲಿ ನಡೆದಿರುವ ಸಂಘರ್ಷ. ಮೊದಲ ಹೋರಾಟದ ಎದುರಾಳಿಗಳನ್ನು ಭವಿಗಳೆಂದು ಕರೆದರೆ ಎರಡನೆಯ ಹೋರಾಟದ ಶತ್ರುಗಳನ್ನು ಡಾಂಭಿಕ ಗುರುಲಿಂಗ ಜಂಗಮ ಶರಣ ಭಕ್ತವರ್ಗ ಎಂದು ಗುರುತಿಸಬಹುದು. ಈ ಎರಡನೆಯ ಹೋರಾಟ ಮೇಲುನೋಟಕ್ಕೆ ವ್ಯಕ್ತಿಯ ಸ್ವಭಾವಕ್ಕೆ ಅನ್ವಯವಾಗುವ ಗುಣದೋಷಗಳ ಆಂತರ್ನಿರೀಕ್ಷೆಯ ಸಂಘರ್ಷದಂತೆ ಕಂಡುಬಂದರೂ ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ವ್ಯಕ್ತಿ ಸ್ವಭಾವದ ದೋಷ ವಿಶ್ಲೇಷಣೆ ನಡೆಸುವ ಗಡಿದಾಟಿ ಇಡೀ ಒಂದು ವರ್ಗದ ನೆಲೆಯ ನಡಾವಳಿಯನ್ನೇ ಪ್ರಶ್ನಿಸುವ ಟೀಕಿಸುವ ಕಟುವಾಗಿ ವಿರೋಧಿಸುವ ಕ್ರಿಯೆಯಾಗಿ ಅದು ಬೆಳೆದಿದೆ. "ಹನ್ನೊಂದನೆ ಶತಮಾನದ ಮಧ್ಯಭಾಗದಿಂದ ಇಳಿಮುಖವಾದ ಜೈನಧರ್ಮದ ಜಾಗ ದಲ್ಲಿ ಶೈವಧರ್ಮ ಬೆಳವಣಿಗೆಯನ್ನು ಹೊಂದಿತ್ತು. ದೇವಾಲಯಗಳ ನಿರ್ಮಾಣದಲ್ಲಿ ವೈಷ್ಣವರು ಒಂಬತ್ತನೇ ಶತಮಾನದಲ್ಲಿ ಕಟ್ಟಿಸಿದ

ಒಂದೆರಡನ್ನು ಬಿಟ್ಟರೆ ಹತ್ತರಿಂದ ಹನ್ನೆರಡನೇ ಶತಮಾನದಲ್ಲಿ ಶೈವರಿಂದ ಬಹಳಷ್ಟು ದೇವಾಲಯಗಳು ನಿರ್ಮಾಣಗೊಂಡವು. ಕಾಳಾಮುಖ ಪಾಶುಪತ ಸಂಪ್ರದಾಯಕ್ಕೆ ಸಂಬಂಧಿಸಿದ ಈ ಶೈವರು ಉತ್ತರದಿಂದ ದಕ್ಷಿಣಕ್ಕೆ ಬಂದು ದೇವಾಲಯಗಳಲ್ಲಿ ನೆಲಸಿದರು. ಅಗ್ರಹಾರದಂತೆಯೇ ಮಠಗಳನ್ನು ಸ್ಥಾಪಿಸಿ ವಿದ್ಯಾಕೇಂದ್ರಗಳನ್ನಾಗಿ ಮಾಡಿದರು. ಮಠದ ಮತ್ತು ದೇವಸ್ಥಾನದ ಆಸ್ತಿಯು ಒಂದೇ ಆಗಿದ್ದಿತು. ಈ ದೇವಾಲಯಗಳಿಗೆ ಸೇವೆ ಸಲ್ಲಿಸಲು ಹಿಂತೆಗೆದರೆ ಅಂಥವರನ್ನು ಜಾತಿಯಿಂದ ಹೊರ ಹಾಕುತ್ತಿದ್ದರು. ಈ ಮಠಗಳಲ್ಲಿರುತ್ತಿದ್ದ ಸ್ಥಾನಪತಿಗಳಲ್ಲಿ ಕೆಲವರು ಬಹಳ ಪ್ರಭಾವಶಾಲಿಗಳಾಗಿದ್ದು ರಾಜಗುರುಗಳೆಂದು ಕರೆಸಿಕೊಂಡಿದ್ದಾರೆ." (ಡಾ॥ ಸಿ. ವೀರಣ್ಣ—ಹನ್ನೆರಡನೇಶತಮಾನದ ಕಾಯಕಜೀವಿಗಳ ಚಳವಳಿ) ಈ ಮಠಗಳು ಜನಗಳಿಂದ ಹಣವನ್ನು ತೆಗೆದುಕೊಂಡು ಬಡ್ಡಿ ವ್ಯವಹಾರ ನಡೆಸುತ್ತಿದ್ದುವು. ಟಂಕಸಾಲೆಯ ಲಾಭದಲ್ಲಿ ಒಂದು ಭಾಗವನ್ನು ಮಠಕ್ಕೆ ತೆಗೆದುಕೊಳ್ಳುತ್ತಿದ್ದುವು. ವಾರಸದಾರರಿಲ್ಲದ ಆಸ್ತಿ ದೇವರಿಗೇ ಸೇರುತ್ತಿತ್ತು. ಜನರು ಅಡವಿಟ್ಟ ಹೊಲವನ್ನು ದೇವಸ್ಥಾನ ವಶಪಡಿಸಿಕೊಳ್ಳುತ್ತಿತ್ತು. ಹೀಗೆ ಮಠದ ಅಧಿಕಾರ ಸಮಾಜದಲ್ಲಿ ಯಾವ ಪ್ರಭುಶಾಹಿಗೂ ಕಡಿಮೆ ಇಲ್ಲದಂತೆ ಪ್ರಭಾವಶಾಲಿಯಾಗಿತ್ತು. ಇಷ್ಟೆಲ್ಲ ಸವಲತ್ತುಗಳನ್ನು ಅನುಭವಿಸುತ್ತಿದ್ದ ಸ್ಥಾನಪತಿಗಳಲ್ಲಿ ಅನೇಕರು ಧಾರ್ಮಿಕನಿಷ್ಠೆ ಇಲ್ಲದವರೂ ದುರ್ವ್ಯಸನಿಗಳೂ ಆಗಿದ್ದರು. ಇಂಥ ಮಠಮಾನ್ಯರ ವಿರುದ್ಧವೂ ಈ ಕಾಯಕಜೀವಿಗಳ ಹೋರಾಟ ನಡೆದಿದೆ.

ಅಯ್ಯಾ ನಾವು ಪರಮ ವಿರಕ್ತರು
ಪಟ್ಟದ ಅಯ್ಯನವರು ಚರಮೂರ್ತಿಗಳು
ಪರದೇಶಿಗಳು ಎಂದು
ಶಂಖ ಗಿಳಿಲು ದಂಡಾಗ್ರ ಎಂಬ ಬಿರುದ ಹಿಡಿದು

ಕಾವಿ ಕಾಷಾಯಾಂಬರವ ಪೊದ್ದು
ಸರ್ವಕಾಯಕದಲ್ಲಿ ಶ್ರೇಷ್ಟರೆಂದು ಗರ್ವದಲ್ಲಿ ಕೊಬ್ಬಿ
ಕಾಮನಾಟವಲ್ಲಿ ಕಲಕಿ ಮನಸ್ಸಿನಲ್ಲಿ
ದುರ್ಗುಣವನಿಟ್ಟುಕೊಂಡು
ಮಾತಿನಲ್ಲಿ ನೀತಿಯು ಸೇರಿಸುತ್ತ ಕಪಟದಲ್ಲಿ
ಚರಿಸುವಂತಹ
ತೊನ್ನ ಹೊಲೆಮಾದಿಗರ ಸಂಗ ಮಾಡಲಾಗದು
ಅವರ ಪ್ರಸಂಗವ ಕೇಳಲಾಗದು
ಅದೇನು ಕಾರಣವೆಂದಡೆ ಗುರುಲಿಂಗ ಜಂಗಮವಾದ ಬಳಿಕ
ಅಷ್ಟಾವರಣದಲ್ಲಿ ನಿಷ್ಠಾಪರರಾಗಿರಬೇಕು ;
ಪರಧನ ಪರಸತಿಯರ ಹಿಡಿಯೆನೆಂಬ ನೇಮದಲ್ಲಿ
ಬಲ್ಲಿದರಾಗಿರಬೇಕು ;
ಶಿವಭಕ್ತರಾದವರ ಭವವ ಗೆಲಿಸಿ ಮೋಕ್ಷವ
ಹೊಂದಿಸಬೇಕು ;
ಶಿವಲಾಂಛನವ ಹೊತ್ತ ಬಳಿಕ ಶಿವನಂತಿರಬೇಕು
ಬರಿದೆ ನಾನು ಮಹೇಶ್ವರನೆಂದು, ನಾನು ಶಿವಭಕ್ತನೆಂದು
ತನ್ನ ಹೃನ್ಮಂದಿರದಲ್ಲಿ ನೆಲಸಿವ ಚಿನ್ಮಯ
ಜಂಗಮಲಿಂಗಕ್ಕೆ
ತನು–ಮನ–ಧನವೆಂಬ ತ್ರಿವಿಧ ಪದಾರ್ಥವನರ್ಪಿಸಿ
ತ್ರಿವಿಧ ಪದಾರ್ಥವ ಗರ್ಭೀಕರಿಸಿಕೊಂಡು
ಪ್ರಸನ್ನ ಪ್ರಸಾದವ ಸ್ವೀಕರಿಸಿ
ಪರತತ್ವ ಪ್ರಸಾದದಲ್ಲಿ ತಾನು ತಾನಾಗಲರಿಯದೆ
ಉಚ್ಚಂಗಿ ದುರ್ಗಿಗೆ ಬಿಟ್ಟ ಪೋತರಾಜನಂತೆ
ಮೂರು ಮಾರು ಜಡೆಗಳ ಬಿಟ್ಟು
ಅಡಿಸೊಳಗಿರುವ ಹಿರಿಯ ಹೋತಿನಂತೆ

ಮೊಳ ಮೊಳ ಗಡ್ಡವ ಬಿಟ್ಟು
ಡೊಂಬ ಜಾತಿಗನಂತೆ ವೇಷವ ತೊಟ್ಟು
ಮೀಸೆಯ ಬೋಳಿಸಿಕೊಂಡು ಕೈಸವ ಧರಿಸಿ
ಸಂಸ್ಕೃತ ಗೀರ್ವಾಣ ಭಾಷೆಯ ಕಲಿತು
ಕಾಕ ಕುಟಿಲ ಕುಹಕದ ಗಾರಿ ಪ್ರಾಜ್ಞೆಯಿಂದ ಬಂದ
ಸುಡಗಾಡು ಸಿದ್ಧಯ್ಯಗಳಂತೆ
ಗಿಡ ಮೂಲಿಕೆಗಳ ತಂತ್ರ ಮಂತ್ರ ಯಂತ್ರಗಳ
ಭಾಷೆಗಳ ಕಲಿತುಕೊಂಡು
ಪುರಜನರ ಮೆಚ್ಚಿಸಬೇಕೆಂದು
ಅಯ್ಯಾ ನಾವು ಕೆರೆ ಬಾವಿಯ ತೆಗೆಸಬೇಕೆಂದು
ಮಠಗುಡಿಯ ಕಟ್ಟಿಸಬೇಕೆಂದು
ಮಾನ್ಯದಲ್ಲಿ ಬಿಲ್ವಗಿಡಗಳ ಹಚ್ಚಬೇಕೆಂದು
ಮದುವೆ ಅಯ್ಯಾಚಾರವ ಮಾಡಬೇಕೆಂದು
ಅನ್ನಕ್ಷೇತ್ರ ಅರವಟ್ಟಿಗೆಯ ಇಡಿಸಬೇಕೆಂದು
ಪುರಾಣಗಳ ಹಚ್ಚಿಸಬೇಕೆಂದು
ಇಂತಿಪ್ಪ ದುರಾಸೆಯ ಮುಂದುಗೊಂಡು
ನಾನಾ ದೇಶವ ತಿರುಗಿ
ಅರಸರ ಮದದಂತೆ ಗರ್ವದಿಂದ ಹೆಚ್ಚಿ
ಹೇಸಿ ಹೊಲೆ ಮಾದಿಗರ ಕಾಡಿ ಬೇಡಿ
ಹುಸಿಯನೆ ಬೊಗಳಿ ಒಬ್ಬನ ಒಲವ ಮಾಡಿಕೊಂಡು
ವ್ಯಾಪಾರ ಮರ್ಯಾದೆಯಲ್ಲಿ ಪೇಟೆಯಲ್ಲಿ ಕುಳಿತು
ಅನಂತ ಮಾತುಗಳನ್ನಾಡುತ್ತ
ಸೆಟ್ಟಿ ಮುಂತಾದ ಅನಂತ ಕಳ್ಳಹಾದರಗಿತ್ತಿಯ ಮಕ್ಕಳ
ಮಾತಿನಿಂದೊಲಿಸಿ, ಅವರು ಕೊಟ್ಟೊಡೆ ಹೊಗಳಿ
ಕೊಡದಿರ್ದಡೆ ಬೊಗಳಿ, ಆ ಭ್ರಷ್ಟ ಹೊಲೆ ಮಾದಿಗರು

ಕೊಟ್ಟ ದ್ರವ್ಯಗಳ ತೆಗೆದುಕೊಂಡು ಬಂದು
ಕಡೆಗೆ ಚೋರರು ಒಯ್ದರೆಂದು
ಮಠದೊಳಗೆ ಮಡಗಿಕೊಂಡು
ಪರಸ್ತ್ರೀಯರ ಹಡಕಿಯೋನಿಯೊಳಗೆ ಇಂದ್ರಿಯಬಿಟ್ಟು
ಕಾಮಕ್ರೋಧದಲ್ಲಿ ಮುಳುಗಿ ಮತಿಗೆಟ್ಟು
ಶಿವಪಥಕ್ಕೆ ದೂರಾಗಿ, ದುರಾಚಾರವ ಆಚರಿಸಿ
ನಡೆ ನುಡಿಗಳ ಹೊರ್ತಾಗಿ ವ್ಯರ್ಥ ಹೊತ್ತುಗಳೆದು
ಸತ್ತು ಹೋಗುವ ಜಡದೇಹಿ ಕಡುಪಾತಕ
ಕತ್ತೆ ಹಡಕರಿಗೆ
ಪರಮ ನಿರಂಜನ ಜಂಗಮ ಲಿಂಗದೇವರೆಂದು ಕರೆತಂದು
ಪಾದತೀರ್ಥ ಪ್ರಸಾದವ ತೆಗೆದುಕೊಂಬುವರಿಗೆ
ಇಪ್ಪತ್ತೊಂದು ಯುಗ ಪರಿಯಂತರ ನರಕ
ಕೊಂಡದಲ್ಲಿಕ್ಕುವ
ಇಂತಪ್ಪ ಜಂಗಮವನು ಪೂಜೆ ಮಾಡುವಂತಹ
ಶಿವಭಕ್ತನ
ಉಭಯತರ ಮೂಗಸೀಳಿ ಮೆಣಸಿನ ಹಿಟ್ಟುತುಪ್ಪವ
ತುಂಬಿ
ಪಡಿಹಾರಿ ಉತ್ತಣ್ಣಗಳೆಡದ ಪಾದುಕೆಯಿಂದೆ
ಫಡ ಫಡನೆ ಹೊಡಿ ಎಂದಾತ
ನಮ್ಮ ಅಂಬಿಗ ಚೌಡಯ್ಯ ನಿಜಶರಣನು.
(ಅಂ. ಚೌ. ವ. ೭೦)

ಕಾಯಕ ಜೀವಿಗಳು ನಡೆಸಿದ ಹೋರಾಟದ ಕೆಲವು ಎದುರಾಳಿ ಮೂಲಗಳ ಕಡೆಗೆ ಅಂಬಿಗರ ಚೌಡಯ್ಯನ ಈ ದೀರ್ಘವಚನ ಬೆರಳು ತೋರಿಸುತ್ತಿದೆ. ಮಠಮಾನ್ಯಗಳಿಗೆ ಸೇರಿದ-ಪರಮ ವಿರಕ್ತರು, ಪಟ್ಟದ

ಅಯ್ಯಗಳು. ಚರಮೂರ್ತಿಗಳು ಶಂಖ ಗಿಳಿಲು ದಂಡಾಗ್ರಗಳ ಬಿರುದಿನ ಶ್ರೀಮಂತಿಕೆಯ ಗರ್ವದಲ್ಲಿ ಕೊಬ್ಬಿ ಮಾಡಬಾರದ ಕೆಲಸ ಮಾಡುತ್ತ ಮುಗ್ಧ ಮೂಢ ಜನರನ್ನು ಶೋಷಿಸುತ್ತಿದ್ದ ಚಿತ್ರ ಬರುತ್ತದೆ. ಇವರು ಜನಸಾಮಾನ್ಯರನ್ನು ಶೋಷಿಸುವುದಕ್ಕೆ ಹಿಡಿಯುತ್ತಿದ್ದ ಮಾರ್ಗ, ಬಳಸುತ್ತಿದ್ದ ವೇಷ-ಭಾಷೆಗಳ ಉಲ್ಲೇಖವಿದೆ. ಕೆರೆ ಬಾವಿ ಅನ್ನಕ್ಷೇತ್ರ ಅರವಟ್ಟಿಗೆ ಇತ್ಯಾದಿ ಸಾರ್ವಜನಿಕ ಸೇವಾಕಾರ್ಯಗಳ ಹೆಸರೇಳಿ ಜನರನ್ನು ನಂಬಿಸಿ ಧಾರ್ಮಿಕ ಅಧಿಕಾರಯುಕ್ತ ಗರ್ವದಿಂದ ಬೀಗುತ್ತಾ ಹಣ ವಸೂಲಿ ಮಾಡುತ್ತಿದ್ದ ಚಿತ್ರವಿದೆ. ಇದಲ್ಲದೆ, ಸೆಟ್ಟಿ ಮುಂತಾದ ಅನಂತ ಕಳ್ಳ ಹಾವರಗಿತ್ತಿ ಮಕ್ಕಳು-ಎನ್ನುವಲ್ಲಿ ಸಾಮಾನ್ಯ ಜನರನ್ನು ವಂಚಿಸುತ್ತಾ ಲಾಭ ಬಡುಕರಾಗಿದ್ದ ವ್ಯಾಪಾರಿವರ್ಗವನ್ನು ಕುರಿತು ಹೇಳುತ್ತಿದೆ. ಈ ಎಲ್ಲ ಶೋಷಕರ ಬಗ್ಗೆ ಚೌಡಯ್ಯನಿಗೆ ಆಕ್ರೋಶ. ಇವರನ್ನು ಕಳ್ಳಹಾದರಿಗರು ಕಡುಪಾತಕ ಕತ್ತೆ ಹಡಿಕರು ಜಡದೇಹಿಗಳು ಎಂಬುದಾಗಿ ಬಯ್ಯುತ್ತಾನೆ. ಇವನ ಈ ಭಾಷೆ ನೋವುಂಡ ನೆಲಮೂಲದ ನೈತಿಕ ಸಿಟ್ಟಿನ ಭಾಷೆ. ಈ ಸಿಟ್ಟು ಬರೀ ಶೋಷಕರನ್ನು ಮಾತ್ರ ತರಾಟೆಗೆ ತೆಗೆದುಕೊಳ್ಳುತ್ತಿಲ್ಲ. ಶೋಷಣೆಗೆ ಒಳಗಾಗಿರುವವರನ್ನು ಸಮಾನವಾಗಿ ದೂಷಿಸುತ್ತಿದೆ. ಈ ದೂಷಣೆ ಅವರಿಗೆ ಎಚ್ಚರಿಕೆ ಹೇಳುವ ನೈತಿಕ ಅಧಿಕಾರದ್ದು. ಹೀಗೆ ಆರ್ಥಿಕ ಮೂಲದಲ್ಲಿ ಸಮಾಜವನ್ನು ಶೋಷಿಸುತ್ತಾ ಆಧ್ಯಾತ್ಮಿಕ ಮಾರ್ಗದಲ್ಲಿ ಭ್ರಷ್ಟಗೊಂಡು ಸಂಸ್ಥೀಕರಣಗೊಂಡಿದ್ದ ಮಠಮಾನ್ಯಗಳ ವಿರುದ್ಧ ಸಮರ ಸಾರಿದಂತೆ ಅಂಬಿಗರ ಚೌಡಯ್ಯ ತನ್ನ ವಚನಗಳಲ್ಲಿ ಪ್ರತಿಕ್ರಿಯಿಸಿದ್ದಾನೆ.

ಸಮಯವ ಮಾಡಿ ಹಣವ ಬೇಡಲೇತಕ್ಕೆ ?
ಆಚಾರಕ್ಕೂ ಹಣದಾಸೆಗೂ ಸರಿಯೆ
ಎಂದನಂಬಿಗ ಚೌಡಯ್ಯ

ಹನ್ನೆರಡನೇ ಶತಮಾನದ ಧಾರ್ಮಿಕ ಮಠ, ಪೀಠಗಳ ಬಗ್ಗೆ ಇವನು

ತೋರಿರುವ ಈ ಪ್ರತಿಕ್ರಿಯೆ ಈಗಿನ ಪೀಠಸ್ಥ ಮಠಮಾನ್ಯರ ಭ್ರಷ್ಟ ಮುಖಗಳ ಕಡೆಗೂ ನಮ್ಮ ಪ್ರಜ್ಞೆಯು ನೋಟ ಹರಿಸುವ ತೀಕ್ಷ್ಣತೆಯಿಂದ ಕೂಡಿದೆ. ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಸ್ತರದ ಎಲ್ಲ ಮೂಲಗಳಲ್ಲೂ ಸಮಾನತೆಯನ್ನೇ ಬಯಸಿ ಒಂದಾದ ಶರಣ ಧರ್ಮದಲ್ಲಿ ಹೇಳಿದಂತೆ ನಡೆಯದ ಕಡುಪಾತಕಿಗಳನ್ನು ಕಂಡು ವ್ಯಗ್ರನಾಗುವ ಅವನ ನೈತಿಕ ಆಕ್ರೋಶದಲ್ಲಿ ಕ್ರಾಂತಿ ಸಹಜ ಸತ್ವವಿದೆ. ಈ ಆಕ್ರೋಶದ ಹಿಂದೆ ಕುರುಡು ಆವೇಶವಿಲ್ಲ, ಅನುಭವದ ನೆಲೆಯ ವಿಚಾರವಿದೆ, ವರ್ಗಮೂಲದ ಸಂಕಟವಿದೆ.

ಚೌಡಯ್ಯನ ವಚನಗಳಲ್ಲಿ ಅನ್ಯಧರ್ಮದವರ ಆಚಾರ ವಿಚಾರಗಳನ್ನು ಕುರಿತ ಖಂಡನೆ ಬಂದಿರುವುದು ತೀರ ಕಡಿಮೆ. ಆದರೆ ಸ್ವಧರ್ಮಿಗಳ ನುಡಿಗೆಟ್ಟ ನಡೆಗೆಟ್ಟ ಬದುಕನ್ನು ಕುರಿತು ತುಂಬಾ ಕಠಿಣವಾಗಿ ಮುಖಕ್ಕೆ ಹೊಡೆದಷ್ಟು ನೇರವಾಗಿ ಖಂಡಿಸುತ್ತಾನೆ. ಈ ಖಂಡನೆಯ ಹಿಂದೆ ತಾವು ಬಾಳುತ್ತಿರುವ ವಚನಧರ್ಮವೂ ಹತ್ತರೊಳಗಿನ ಹನ್ನೊಂದಾಗಬಾರದು ಎಂಬ ಕರುಳಾಳದ ಕಳಕಳಿ ಕಾಣುತ್ತದೆ.

ತನ್ನುವನರಿದುದುಂಟಾದಡೆ ತಾನೆ ದಿಟ

ಚೌಡಯ್ಯ ನಂಬಿದ ಸಿದ್ಧಾಂತಕ್ಕೆ ಬದ್ಧನಾಗಿ ಶ್ರದ್ಧೆ ಪ್ರಾಮಾಣಿಕತೆಗಳಿಂದ ಬದುಕಿದ ಶರಣ.

> ಆರುಲಿಂಗ ಮೂರುಲಿಂಗವೆಂಬರು
> ನಮಗುಳ್ಳುದೊಂದೆ ಲಿಂಗ
> ಒಂದು ಲಿಂಗದಲ್ಲಿ ಒಂದು ಮನಸಿಕ್ಕಿದಡೆ
> ಮರಳಿನ್ನೊಂದು ಲಿಂಗವ ನೆನೆಯಲಿಲ್ಲವೆಂದಾತನಂಬಿಗ
> ಚೌಡಯ್ಯ

ಅವನ ಅಂತರಂಗದಲ್ಲಿ ನೆಲೆ ಮಾಡಿರುವ ತೊಡಕಿಲ್ಲದ ನಂಬಿಕೆ ನಿಷ್ಠೆಯು

ಸ್ವರೂಪವನ್ನು ಈ ವಚನ ಅನಾವರಣಗೊಳಿಸಿದೆ. ಇವನ ನಂಬಿಕೆ ಕುರುಡು ನಂಬಿಕೆಯಲ್ಲ. ವಸ್ತುಸ್ಥಿತಿಯನ್ನು ಅರಿತು ನಡೆಯುವ ಸಾಧಕನೊಬ್ಬನ ಜ್ಞಾನದೃಷ್ಟಿ ಇವನ ವಚನಗಳಲ್ಲಿ ಅಂತರ್ಗತವಾಗಿರುವ ಜೀವಶಕ್ತಿ.

ಮಾತೇ ಸೂತಕವಾಗಿ ಸಂದೇಹ ಮಾಡುವಲ್ಲಿ
ಅದೇತರಿಂದ ಒದಗಿದ ಕುರುಹು !
ಶಿಲೆಯ ಪ್ರತಿಷ್ಠೆಯ ಮಾಡಿ ತನ್ನ ಒಲವರ ವಿಶ್ವಾಸದಿಂದ
ಬಲಿಕೆಯನರಿವುದು ಆ ಶಿಲೆಯೋ ಮನವೋ ?
ಎಂದನಂಬಿಗ ಚೌಡಯ್ಯ.

ಈ ಮೇಲಿನ ವಚನದಲ್ಲಿನ ವಿಚಾರದೃಷ್ಟಿ ಅವನ ನಂಬಿಕೆ ಮತ್ತು ಸಾಧನೆಗಳ ಸ್ಥಿತಿ ಸ್ವರೂಪಗಳನ್ನು ತೋರಿಸುತ್ತಿದೆ. ನಡೆ ನುಡಿಗಳೊಂದಾದ ಅಂತರಂಗ ಬಹಿರಂಗ ಏಕವಾದ ಪಾರದರ್ಶಕ ಸ್ಥಿತಿಯ ಬದುಕು ಇವನದು. ಇಂಥ ನೆಲೆಯಲ್ಲಿ ನಿಂತ ಈ ಶರಣನಿಗೆ ನೆಲಿತಪ್ಪಿ ನಡೆವ ನುಡಿಗಳ್ಳರನ್ನು ನಡೆಗಳ್ಳರನ್ನು ಕಂಡಾಗ ಸಿಟ್ಟು ಬಂದಿರುವುದು ಸಹಜವಿದೆ. ಅವನ ವಚನಗಳು ಶೂನ್ಯದಲ್ಲಿ ಸೃಷ್ಟಿಯಾದವಲ್ಲ. ಪ್ರತಿಕ್ರಿಯಾತ್ಮಕ ಶಕ್ತಿಯಿಂದ ಉರಿಯುತ್ತಿವೆ. ಹೀಗೆ ಈ ಉರಿಯುವ ಕ್ರಿಯೆಗೆ ಅವನ ಸುತ್ತಮುತ್ತ ಇದ್ದ ಶರಣ ಜಗತ್ತು ಕಾರಣವೆಂಬುವಕ್ಕೆ ಅವನ ವಚನಗಳೇ ಸಾಕ್ಷಿ.

ನಂಬಿಗಿಲ್ಲದ ಲಿಂಗದಿ
ನಂಬಿಗಿಲ್ಲದ ಜಂಗಮದಿ
ನಂಬಿಗಿಲ್ಲದ ತೀರ್ಥಪ್ರಸಾದದಿ
ಅಂಬಲಿಯ ಕೊಂಡಂತೆ
ಇಂಥವರ ನಂಬಲಾಗದು
ಎಂದ ನಮ್ಮ ಅಂಬಿಗನ ಚೌಡಯ್ಯ.

ನಂಬಿಗಿಲ್ಲದ ಲಿಂಗ ಜಂಗಮ ತೀರ್ಥಪ್ರಸಾದಗಳ ಕಡೆ ಅಂಬಲಿಯ ಕೊಂಡಡೆ ಅದು ಅಶನಾರ್ಥವಾಗುತ್ತದೆಯೇ ಹೊರತು ಸಲೆಯರಿತು ನಡೆದ ನಂಬುಗೆಯು ನಿಜವಾಗುವುದಿಲ್ಲ. ಭೋಗ ಜೀವನಕ್ಕೆ ದಾಸರಾದ ವೇಷಧಾರಿ ಜಂಗಮರನ್ನು ಕುರಿತು

ಈಶ ಲಾಂಛನವ ತೊಟ್ಟು
ಮನ್ಮಥ ವೇಷ ಲಾಂಛನವ ತೊಡಲೇಕೆ ?
ಇದು ನಿಮ್ಮ ನುಡಿನಡೆಗೆ ನಾಚಿಕೆಯಲ್ಲವೆ ?

ಎಂದು ಪ್ರಶ್ನಿಸುತ್ತಾನೆ. ಭೋಗವನ್ನು ಗೊಂದಣವೆಂದು ಕರೆದು ಈ ಗೊಂದಣ ಘನ ಲಿಂಗದ ಮೆಚ್ಚಲ್ಲ ಎಂದು ನಿಷ್ಠುರವಾಗಿ ನುಡಿಯುತ್ತಾನೆ.

ಭೋಗ ಎಂಬುದು ಆಸೆಗೆ ದಾಸನಾಗಿರುವುದು. ಆಸೆ ಎಂಬುದು ಅನಂತ ದುಃಖಗಳನ್ನು ತರುವುದು.

ಆಶೆಯುಳ್ಳಾತನೊಬ್ಬರಾಧೀನದಲ್ಲಿಪ್ಪನು
ಆಶೆಯ ಮಸೆಯ ಕೊನೆಯರಿದಾತ
ಕೈಲಾಸದಾಚೆಯಲ್ಲಿಪ್ಪಾತನೆಂದಾತ
ಅಂಬಿಗ ಚೌಡಯ್ಯ.

ಈ ವಚನಕಾರ ತನ್ನ ಅಭಿಪ್ರಾಯವನ್ನು ನೇರ ಮಾತುಗಳಲ್ಲಿ ಹೇಳಿರುವಂತೆ ಕಂಡರೂ ಇಲ್ಲಿಯ ಚಿಂತನೆ ವಿಶಿಷ್ಟವಾಗಿದೆ. ಆಸೆ ಕೆಟ್ಟದ್ದು. ಆಸೆಗೆ ಬಲಿಬಿದ್ದವನು ಅದರ ಪೂರೈಕೆಗಾಗಿ ಹಲವರ ದಾಸನಾಗಬೇಕಾಗುತ್ತದೆ. ಈ ದಾಸ್ಯ ಆತ್ಮಗೌರವವನ್ನು ಹಾನಿಗೊಳಿಸುತ್ತದೆ. ಆದ್ದರಿಂದ ಆಸೆಯನ್ನು ಗೆಲ್ಲುವುದು ಎಂದರೆ ಮನದ ಮಿತಿಯನ್ನು ಅರಿಯುವುದು, ಮನವನ್ನು ನಿಯಂತ್ರಿಸುವುದು. ಮನವನ್ನು ಗೆಲ್ಲುವ

ಕ್ರಿಯೆಯೇ ಮಹತ್ತರ ಪೂಜೆ. ಇದು ಕೈಲಾಸ ಗಳಿಕೆಗಿಂತ ಹೆಚ್ಚಿನ ಸಾಧನೆ ಎನ್ನುತ್ತಾನೆ ಚೌಡಯ್ಯ. ಇವನ ಆಲೋಚನೆ ವಾಸ್ತವದ ನೆಲೆಯಲ್ಲಿ ಅರಳಿದ್ದು: ಬದುಕು ಮತ್ತು ವ್ಯಕ್ತಿ ಇವುಗಳ ಪರಸ್ಪರ ಆರೋಗ್ಯಪೂರ್ಣ ಹೊಂದಾಣಿಕೆಗೆ ಸಂಬಂಧಿಸಿದ್ದು. ಈ ನೆಲೆಯ ಶುದ್ಧ ಜೀವನವೇ ನಿಜವಾಗಿ ದೇವರ ಸಾಕ್ಷಾತ್ಕಾರ ಎಂಬುದು ಇವನ ತಿಳಿವಳಿಕೆ.

ತನ್ನವ ಮರೆದು ದೇವರ ಕಂಡೆನೆಂಬ ಕಾರಣ
ಹರಿಸುರ ಬ್ರಹ್ಮಾದಿಗಳೆಲ್ಲರೂ ತಲೆಕೆಳಗಾಗಿ ಹೋದರು
ಆ ದೇವರ ಮರೆದು ತನ್ನವನರಿದುದುಂಟಾದಡೆ
ತಾನೆ ದಿಟವೆಂದನಂಬಿಗ ಚೌಡಯ್ಯ.

ಸಾಧಕನಿಗೆ ತನ್ನನ್ನು ತಾನು ಅರಿಯುವ ಕ್ರಿಯೆ ಮುಖ್ಯ. ತನ್ನನ್ನು ತಾನು ಗೆಲ್ಲದೆ ದೇವರನ್ನು ಕಾಣುತ್ತೇನೆ ಎಂಬ ಭ್ರಮೆಯಲ್ಲಿ ಬದುಕನ್ನು ವ್ಯರ್ಥಗೊಳಿಸುವುದನ್ನು ಚೌಡಯ್ಯ ನೇರವಾಗಿ ತಿರಸ್ಕರಿಸುತ್ತಾನೆ. ಕಾಣದ ದೇವರ ಸಾಕ್ಷಾತ್ಕಾರದ ವ್ಯರ್ಥಾಲಾಪಕ್ಕಿಂತ 'ತನ್ನವನರಿದುದುಂಟಾದಡೆ ತಾನೆ ದಿಟ' ಎಂಬ ಇವನ ಮಾತು ವೈಚಾರಿಕ ನೆಲೆಗೆ ಮುಖ ಮಾಡಿದ ಮಾತು. ತನ್ನ ವಚನಗಳ ಅಂಕಿತದಲ್ಲಿ ಯಾವ ಇಷ್ಟದೈವದ ಹೆಸರನ್ನೂ ಸೇರಿಸದೆ ತನ್ನ ಹೆಸರನ್ನೇ ಸೇರಿಸಿಕೊಂಡಿರುವ ಅವನ ರೀತಿಯೇ ಅವನ ನಿಲುವಿಗೆ ಭಾಷ್ಯವಾಗಿದೆ.

ಮತ್ತೊಂದು ವಿಶೇಷವೆಂದರೆ, ಇವನು ಎಲ್ಲೂ ಮೇಲ್ವರ್ಗದ ವಚನಕಾರರನ್ನು ಕುರಿತು ಮತ್ತೆ ಮತ್ತೆ ನಮೋ ನಮೋ ಎಂದಿರುವ ಕೃತಕೃತ್ಯಭಾವವಾಗಲೀ ಧನ್ಯತಾ ಭಾವದಲ್ಲಿ ಹಾಡಿ ಹೊಗಳಿರುವುದಾಗಲೀ ಕಾಣುವುದಿಲ್ಲ.

ಓಂ ನಮಃಶಿವಾಯ ಎಂದು ನೀವು ನುಡಿಯುವಿರಿ
ನಾವು ಇಲ್ಲಿ ಉಂಟೆಂದು ಅರಿಯಿರಿ

ಆರು ಅಕ್ಷರದ ಕಡೆಯಲಿ ನಾನೂ ಬಸವಣ್ಣ ಎಂದ
ಗುರು ಅಂಬಿಗರ ಚೌಡಯ್ಯ.

ಬಸವನೇ ಭಕ್ತನು
ಪ್ರಭುದೇವರೇ ಜಂಗಮ
ಇಂತೆಂಬ ಭೇದವಿಲ್ಲವಯ್ಯಾ
ಅರಿವೇ ಗುರು ಗುರುವೇ ಪರಶಿವನು
ಇದು ತಿಳಿದವನೇ ಪರಂಜ್ಯೋತಿ
ಎಂದ ನಮ್ಮ ಅಂಬಿಗರ ಚೌಡಯ್ಯ.

ಹೀಗೆ ಪ್ರಶ್ನೆಯ ನೆಲೆಯಲ್ಲಿ ವ್ಯಕ್ತಿತ್ವವನ್ನು ಗ್ರಹಿಸುವ ದೃಷ್ಟಿ ಈ ಅಂಬಿಗನಿಗಿರುವ ವಿಶೇಷ ಗುಣ. ಇದು ಉದ್ಧಟತನದ ವರ್ತನೆಯಲ್ಲ; ಸಾಧಕನಾದವನು ಸಿದ್ಧಿಪಡೆಯಲು ಒಡಮೂಡಿಸಿಕೊಳ್ಳಬೇಕಾದ ಛಲದ ಫಲ ; ಪರಂಜ್ಯೋತಿ-ಸ್ವರೂಪರಾಗಲು ಸಕಲರಿಗೂ ಸಾಧ್ಯ ಎಂಬ ವಿವೇಕದ ವಿಚಾರ.

ಕಳವು ಪಾರ ದ್ವಾರಕ್ಕೆ ಪರಾಕುಂಟೆ ?
ಅದು ತನ್ನ ಒಡಲಳಿವ ಇರವು
ವರ್ಮ ಧರ್ಮ ವಚನಾನುಭವಂಗಳ ಮಾಡುವಲ್ಲಿ
ಪರಚಿಂತೆ ಪರಾಕು ಪರಿಭ್ರಮಣ
ಈ ಗುಣ ತನ್ನರಿವಿಂಗೆ ಕೇಡೆಂದನಂಬಿಗ ಚೌಡಯ್ಯ.

ಪರರಿಗೆ ಪರಾಕು ಹಾಕುತ್ತಾ, ಅವರ ಅನುಯಾಯಿಗಳಾಗಿ ಸುತ್ತುತ್ತಾ ಪರಚಿಂತೆಯಲ್ಲಿ ಕಾಲ ಕಳೆಯುವುದನ್ನು ಚೌಡಯ್ಯ ನಿಷ್ಠುರವಾಗಿ ಖಂಡಿಸುತ್ತಾನೆ. ಇಂಥ ನಡತೆಯಿಂದ ವ್ಯಕ್ತಿ ತನ್ನ ಅರಿವನ್ನು ಬೆಳಸಿ ಕೊಳ್ಳಲಾರ, ಸ್ವಂತಿಕೆಯನ್ನು ಕಂಡುಕೊಳ್ಳಲಾರ. ಈ ಗುಣ ತನ್ನರಿವಿಂಗೆ ಕೇಡು ಎಂಬುದು ಅವನ ನಿಲುವು.

ಕಾಯಕಕ್ಕೆ ಗೌರವ ಮತ್ತು ಪಡಿಹಾರಿಯ ನಿಷ್ಠೆ :

ಕಾಯಕದ ತಾತ್ವಿಕ ನೆಲೆಗೆ ಸಂಬಂಧಿಸಿದಂತೆ ಎಲ್ಲ ವರ್ಗದ ವಚನಕಾರರ ನಿಲುವೂ ಸಮಾನಶೀಲವಾದುದು. ಆದರೆ ಆದರ್ಶದ ತಾತ್ವಿಕ ರೂಪವನ್ನು ಆಚರಣೆಯ ಸ್ವರೂಪವಾಗಿಸಿ ಬಾಳುವಲ್ಲಿ ಆಗುವ ಮೋಸ ವಂಚನೆಗಳನ್ನು ಕುರಿತು ಮೇಲ್ವರ್ಗದ ವಚನಕಾರರಿಗಿಂತ ಕೆಳವರ್ಗದ ವಚನಕಾರರ ನಿಲುವು ನಿಷ್ಠುರವಾದುದು. "ಕಾಯಕದ ಮಹತ್ವವನ್ನು ಅನುಭವ ಮಂಟಪದಲ್ಲಿ ಒತ್ತಿ ಒತ್ತಿ ಹೇಳಿದ್ದರ ಉದ್ದೇಶ ಅಲ್ಲಿಯೇ ಇದ್ದ ಕಾಯಕವನ್ನೇ ಮಾಡಿ ಬದುಕುತ್ತಿದ್ದ ವಚನಕಾರರಿಗಲ್ಲ. ದೇವಸ್ಥಾನಗಳಲ್ಲಿ ಅಗ್ರಹಾರಗಳಲ್ಲಿ ಕುಳಿತು ಕಲಿಸುತ್ತಿದ್ದ ಕಾಯಕವಿಲ್ಲದ ವಿದ್ಯೆಗೆ, ಅರ್ಥವಾಗದ ಭಾಷೆಯಲ್ಲಿ ಕಲಿಸುತ್ತಿದ್ದವರಿಗೆ." (ಡಾ॥ ಸಿ. ವೀರಣ್ಣ—ಹನ್ನೆರಡನೇ ಶತಮಾನದ ಕಾಯಕ ಜೀವಿಗಳ ಚಳವಳಿ).

ಅಂಬಿಗರ ಚೌಡಯ್ಯ ಆಗಿನ ಕಾಲದ ಕಾಯಕ ಜೀವಿ ವಚನಕಾರರ ಪ್ರತಿನಿಧಿಯಾಗಿ ಕಂಡುಬರುತ್ತಾನೆ. ಬೇರೆ ವಚನಕಾರರು ತಮ್ಮ ವಚನಗಳ ಕೊನೆಯಲ್ಲಿ ತಮ್ಮ ತಮ್ಮ ಇಷ್ಟದೈವಗಳ ಹೆಸರನ್ನು ಅಂಕಿತವಾಗಿಟ್ಟುಕೊಂಡರೆ, ಚೌಡಯ್ಯನ ವಚನಗಳ ಅಂಕಿತ-ಅಂಬಿಗ ಚೌಡಯ್ಯ. 'ಅಂಬಿಗ' ಎಂಬ ವೃತ್ತಿಸೂಚಕ ಪದವನ್ನು ಹೆಮ್ಮೆಯಿಂದ ತನ್ನ ಹೆಸರಿನ ವಿಶೇಷಣವಾಗಿ, ಹೆಸರೇ ಆಗಿ, ದೈವವಾಗಿ ಕರೆದುಕೊಂಡಿರುವಲ್ಲಿ ಅವನ ವ್ಯಕ್ತಿತ್ವದ ಸ್ವರೂಪದರ್ಶನವಾಗುತ್ತದೆ. ಹಾಗೆಯೇ ಅವನ ಹೋರಾಟದ ಪರಿಚಯುವಾಗುತ್ತದೆ. ಕಾಯಕವೇ ಕೈಲಾಸವೆಂಬುದು ಅವನಿಗೆ ಕೇವಲ ಆದರ್ಶವಲ್ಲ. ಅದು ಅವನ ಬದುಕು, ಅಭಿಮಾನ, ಪ್ರಾಣ. ಇದರಲ್ಲಿ ಎರಡೆಂಬುದಿಲ್ಲ. ಇವನು ತನ್ನ ವಚನಗಳಲ್ಲಿ ಮತ್ತೆ ಮತ್ತೆ ನೆನಪಿಸಿ ಗೌರವಿಸುವುದು ಕೂಡ ಇದೇ ರೀತಿಯ ನಿಷ್ಠಾವಂತ ಕಾಯಕ ಜೀವಿಗಳನ್ನೇ. ಅಂಥ ಶರಣರಲ್ಲಿ ಪಡಿಹಾರಿ ಉತ್ತಯ್ಯ ಒಬ್ಬ. ಚೌಡಯ್ಯನ ಬಹಳಷ್ಟು ವಚನಗಳಲ್ಲಿ ಪಡಿಹಾರಿ ಉತ್ತಯ್ಯನ ಹೆಸರು ಮತ್ತೆ ಮತ್ತೆ ಬಳಕೆಯಾಗಿದೆ. ಅದೂ ಆ ಪಡಿಹಾರಿಯ ಎಡವ

ಪಾದರಕ್ಷೆ ತೆಗೆದುಕೊಂಡು ಭಾಷೆ ತಪ್ಪಿದ ಸ್ವಧರ್ಮಿಗಳಿಗೆ ಕಪಾಳಮೋಕ್ಷ ಕಾಣಿಸುವುದಕ್ಕೆ. ಉತ್ತಯ್ಯ ಪಡಿಹಾರಿ (ಪ್ರತೀಹಾರಿ, ದ್ವಾರಪಾಲಕ) ಕಾಯಕ ಮಾಡಿಕೊಂಡಿದ್ದ ನಿಜಶರಣ. ಕಾಯಕಜೀವಿಯಾದ ಈ ಪಡಿಹಾರಿಯ ಬಗ್ಗೆ ಅಂಬಿಗಚೌಡಯ್ಯನಿಗಿರುವ ಗೌರವ ಅಪಾರ ವಾದುದು. ಈ ಕಾರಣದಿಂದಲೇ ವೀರಶೈವರಾಗಿದ್ದೂ ಅಯೋಗ್ಯ ರೀತಿಯಲ್ಲಿ ನಡೆಯುವವರ ಕೆನ್ನೆಗೆ ಈ ಕಾಯಕಜೀವಿಯ ಎಡದ ಕಾಲಿನ ಎಕ್ಕಡದಿಂದ ಹೊಡೆಯುವ ಸಿಟ್ಟು ತೋರುತ್ತಾನೆ. ದಡ್ಡ ಶಿಖಾಮಣಿಗಳಿಗೆ ಬುದ್ಧಿವಂತ ಹುಡುಗನನ್ನು ತೋರಿಸಿ 'ಅವನ ಕಾಲ ಕೆಳಗೆ ನುಸಿ' ಎಂದು ಹೇಳುವ ಜನಪದ ವಾಡಿಕೆಯಂತೆ ಈ ಪ್ರಯೋಗ ಕೆಲಪೊಮ್ಮೆ ಬಳಕೆಯಾಗಿದೆ. ತಪ್ಪಿ ನಡೆವವ ಯಾರೇ ಆಗಿರಲಿ, ಎಂಥ ವನೇ ಇರಲಿ ಹಿಡಿದು ನಿಲಿಹಾಕಿ ಪ್ರಶ್ನಿಸುವ ಒಡಲಾಳದ ನೈತಿಕ ಬಲದ ಬೆಂಕಿಗುಣ, ಈ ಅಂಬಿಗನ ವಚನಗಳ ಮುಖ್ಯಗುಣ. ಈ ಬೆಂಕಿ ಕಸವನ್ನು ಸುಟ್ಟು ಕಾಳಿಕೆಯನ್ನು ಕಳೆದು ಅಟ್ಟು ಉಣ್ಣಿಸುವ ಗುಣದ್ದು. ತುಂಬು ಅಭಿಮಾನದಿಂದ ತನ್ನನ್ನು ತಾನೇ 'ನಿಜಶರಣ ಅಂಬಿಗ ಚೌಡಯ್ಯ' ಎಂದು ಕರೆದುಕೊಳ್ಳುತ್ತಾನೆ. ಈ ಹೆಗ್ಗಳಿಕೆಯ ಹಿಂದಿನ ನೈತಿಕತೆ ಪ್ರಶ್ನಿಸುವ ಗೆರೆ ಮೀರಿ; ಆತ್ಮೀಯವಾಗಿ ಅರಿತು ಕೊಳ್ಳುವ ಪರಿಗೆ ಒಳಗಾಗುವಂಥದ್ದು. ಹಾಗೆಯೇ ಇವನ ಈ ಸಿಟ್ಟಿನ ಮಾತುಗಳ ಹಿಂದೆ ಕೆಟ್ಟದ್ದನ್ನು ತಿರಸ್ಕರಿಸುವ ಅಲ್ಲದ್ದನ್ನು ಖಂಡಿಸುವ ಸಣ್ಣತನವನ್ನು ದೂರೀಕರಿಸುವ ಆತ್ಮಬಲವಿದೆ. ಈ ನೈತಿಕ ಬಲದ ಸ್ವರೂಪ ಶಕ್ತಿ ಅರ್ಥವಾಗಬೇಕಾದರೆ ಎಡಗಾಲಿನ ಎಕ್ಕಡದಲ್ಲಿ ಹೊಡೆವ ಮಾತುಗಳನ್ನಾಡಿ ನಿಂದೆಗೆ ಗುರಿಯಾಗಿರುವ ಕವಿ ರಾಘವಾಂಕನ ಪ್ರಸಂಗ ವನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವಿದೆ.

'ಸಿದ್ಧರಾಮ ಚರಿತೆ'ಯನ್ನು ಬರೆಯುವಾಗ ರಾಘವಾಂಕನು ಸಿದ್ಧರಾಮನನ್ನು ಎರಡನೆಯ ಶಿವನೆಂದೂ ಅವನ ಹುಟ್ಟೂರಾದ ಸೊನ್ನಲಾಪುರವನ್ನು ಎರಡನೆಯ ಕೈಲಾಸವೆಂದೂ ವರ್ಣಿಸುತ್ತಾನೆ.

ಹೀಗೆ ಬಣ್ಣಿಸುವಾಗ ಇದನ್ನು ವಿರೋಧಿಸುವವರನ್ನು ಕುರಿತು 'ಪರವಾದಿ ಯಾರವನ ಶಿರದೊಳಿಳುಹುವೆನ್ನ ವಾಮಪದ ಪಾದುಕೆಯನು' ಎಂದು ಘೋಷಿಸುತ್ತಾನೆ. ರಾಘವಾಂಕ ಕನ್ನಡದ ಒಬ್ಬ ಮಹತ್ವದ ಕವಿ. ಆದರೆ ಈ ನಿರ್ದಿಷ್ಟ ಸನ್ನಿವೇಶದಲ್ಲಿ ಅವನ ಮತೀಯ ಆವೇಶ ಕವಿ ಪ್ರಜ್ಞೆಯನ್ನು ಹಿಂದಿಕ್ಕಿ ಉಚಾಯಿಸಿ ನುಗ್ಗಿದೆ. ಮತೀಯ ತಾಮಸಾಂಶದ ಈ ಆಕ್ರೋಶಕ್ಕೆ ಯಾವುದೇ ನೈತಿಕ ಬೆನ್ನೆಲುಬಿಲ್ಲ. ಚೌಡಯ್ಯ ತನ್ನ ವಚನಗಳಲ್ಲಿ ಖಂಡಿಸುವುದು ಪರವಾದಿಗಳನ್ನಲ್ಲ: ಒಂದು ಜೀವನ ಸಿದ್ಧಾಂತವನ್ನು ಒಪ್ಪಿಕೊಂಡ ಮೇಲೆ ಅದಕ್ಕೆ ಬದ್ಧವಾಗಿ ನಡೆಯದೇ ಹೋಗುವ ದುರಾಚಾರಿಗಳನ್ನು. ಈ ಹೋಲಿಕೆಯ ನೆಲೆಯಲ್ಲಿ ವಿವೇಚಿಸಿದಾಗ ಚೌಡಯ್ಯನ ಸಿಟ್ಟಿನ ಮಾತುಗಳ ಹಿಂದಿರುವ ನೈತಿಕ ಬಲದ ಸ್ವರೂಪ ಅರಿವಾಗುತ್ತದೆ.

ವರ್ಗ ಮೂಲಗಳ ಮಿತಿ–ಸಾಂದ್ರತೆ :

ವಚನ ಧರ್ಮದ ಎಷ್ಟೋ ವಿಷಯಗಳಿಗೆ ಸಂಬಂಧಿಸಿದಂತೆ ಅಂಬಿಗರ ಚೌಡಯ್ಯ ಪ್ರತಿಕ್ರಿಯಿಸಿರುವ ರೀತಿಯ ವಿಶೇಷತೆಯನ್ನು ಅರಿಯಬೇಕಾದರೆ ಅವನ ಆಲೋಚನೆಗಳನ್ನು ಬಸವಣ್ಣನ ಆಲೋಚನೆಗಳ ಜೊತೆ ತೌಲನಿಕವಾಗಿ ಗಮನಿಸುವುದು ಹೆಚ್ಚು ಸೂಕ್ತ. ಎರಡು ಭಿನ್ನವರ್ಗಗಳಿಂದ ಬಂದ ಈ ಎರಡು ಚೇತನಗಳ ಅಭಿವ್ಯಕ್ತಿ ನೆಲೆಯಲ್ಲಿ ವರ್ಗ ಮೂಲದ ಮಿತಿ–ಸಾಂದ್ರತೆಯ ಅನುಭವ ವಿಶೇಷ ಜೀವರಕ್ತ ಮಿಡಿದಿದೆ.

ಸ್ಥಾವರ ಪೂಜೆಯನ್ನು ನಿರಾಕರಿಸಿದ ಬಸವಣ್ಣನ ನಿಲುವಿನಲ್ಲಿ ಸಂಸ್ಥೀಕರಣಗೊಂಡಿದ್ದ ದೇವಾಲಯ- ಮಠಮಾನ್ಯವರ್ಗವನ್ನು ವಿರೋಧಿಸುವ ದೃಷ್ಟಿ ಇದೆ. ಆದರೂ ಆ ವಿರೋಧ ಒಡವರನ್ನು ಸಮಾಧಾನಪಡಿಸಿ ಪರ್ಯಾಯವಾಗಿ ಮತ್ತೊಂದು ಕ್ರಿಯೆಯ ಕಡೆಗೆ ಅವರ ದೃಷ್ಟಿಯನ್ನು ಹೊರಳಿಸುತ್ತಾ, ಅದಕ್ಕಿಂತ ಇದು ಉನ್ನತವಾದುದು ಎಂಬುದನ್ನು ಒತ್ತಿ ಹೇಳುವುದಾಗಿದೆ.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರ ಹೊನ್ನ ಕಳಶವಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ
ಕೂಡಲ ಸಂಗಮ ದೇವಾ

ಇಲ್ಲಿ ಉಳ್ಳವರು ಶಿವಾಲಯವ ಮಾಡುವುದನ್ನು ಬಸವಣ್ಣ ನೇರವಾಗಿ ಪ್ರಶ್ನಿಸುತ್ತಿಲ್ಲ, ನಿರಾಕರಿಸುತ್ತಿಲ್ಲ. ಬದಲಾಗಿ ಉಳ್ಳವರು ಮಾಡುತ್ತಾರೆ ನಾನು ಬಡವ ಮಾಡಲಾರೆ ಎಂಬ ಅಸಹಾಯಕ ಸ್ಥಿತಿಯಲ್ಲಿ ವಚನದ ದನಿ ತಗ್ಗುತ್ತದೆ. ಮುಂದೇ ಅದೇ ದನಿ ತೆಗೆದುಕೊಳ್ಳುವ ಬಲ ದೇಹವನ್ನೇ ದೇವಾಲಯವಾಗಿಸಿರುವ, ಕಾಯವನ್ನೇ ಕಾಯಕವಾಗಿಸಿರುವ ವ್ಯಕ್ತಿ ಸಾಧನೆಯ ಮೂಲದ ಕಡೆಗೆ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಸಾಲಿನಲ್ಲಿ ಪ್ರಗತಿಪರ ಆಶಯದ ಸಮಷ್ಟಿ ಚಿಂತನೆ ವ್ಯಂಜಿತವಾಗುತ್ತದೆ. ಆದರೆ ಇದೇ ವಿಚಾರ ಅಂಬಿಗರ ಚೌಡಯ್ಯನಲ್ಲಿ ಹೇಗೆ ಮೈದಾಳಿದೆ ನೋಡಿ-

ದೇಹಾರವ ಮಾಡುವ ಅಣ್ಣಗಳಿರಾ
ಒಂದು ತುತ್ತು ಆಹಾರವನಿಕ್ಕಿರೇ
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ
ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ
ಆ ಹರನಿಲ್ಲೆಂದ ನಂಬಿಗ ಚೌಡಯ್ಯ.

ಈ ವಚನದ ದನಿ ಪ್ರಧಾನವಾಗಿ ಹಸಿವಿನ ಕಡೆಗೆ, ಅನ್ನದ ಕಡೆಗೆ ಒತ್ತು ಕೊಟ್ಟಂತೆ ಕೇಳುತ್ತದೆ. ದೇಹಾರಕ್ಕೆ ಆಹಾರವೇ ನಿಚ್ಚಣಿಕೆ ಎಂಬ ಮಾತು ಆಧ್ಯಾತ್ಮಕ್ಕಿಂತ ಮೊದಲು ಅನ್ನ ಮುಖ್ಯ ಎಂಬುದನ್ನು

ಹೇಳುತ್ತಿದೆ. ಇದು ವ್ಯಕ್ತಿಯೊಬ್ಬನ ಹಸಿವಲ್ಲ, ಇಡೀ ಸಮಾಜದ ಸಮಸ್ಯೆ. ಹಸಿವಿನ ಲೋಕದಿಂದ ಬಂದ ಶರಣರ ಅಂತರಂಗದ ನುಡಿನೆತ್ತರು ಈ ವಚನ. ಆತ್ಮೀಯ ಧಾಟಿಯ ಅನುಬೋಧೆಯ ರೀತಿಯಲ್ಲಿ ಹರಿಯುವ ಇಲ್ಲಿನ ಭಾಷೆ, ಚೌಡಯ್ಯನ ಇತರ ವಚನಗಳಲ್ಲಿ ಅಷ್ಟಾಗಿ ಕಾಣಲಾಗದ ಭಾವದ ಅಪೂರ್ವರೂಪದ್ದು. ದೇಹಾರವ ಮಾಡುತ್ತ ಆಹಾರವಸಿಕ್ಕದಿದ್ದರೆ ಆ ಹರನಿಲ್ಲ. ಆಹಾರ ಮೊದಲು ಆ ಹರ ನಂತರ. ಹೊಟ್ಟೆಗೆ ಹಿಟ್ಟಿಲ್ಲದಿದ್ದಾಗ ಜುಟ್ಟಿಗೆ ಮಲ್ಲಿಗೆ ಹೂವೇ ? ಇದು ಹಸಿವಿನ ಲೋಕದ ಅನುಭವ. ಕಾಲು ಕಂಬ ದೇಹ ದೇಗುಲ ಶಿರ ಹೊನ್ನ ಕಳಶವಾಗುವ ರೂಪಕ ನೆಲೆಯ ಆಶಯಕೂ ಒಂದು ತುತ್ತು ಆಹಾರವಸಿಕ್ಕಿರೇ ಎಂಬ ಹಸಿವಿನ ಲೋಕದ ಕೂಗಿಗೂ ಇರುವ ಅಂತರ ಗಮನಾರ್ಹವಾದುದು. ಶ್ರಮ ಜೀವನದ ನೆಲೆಯಿಂದ ಬಂದ ವಚನಕಾರರಿಗೂ ಮೇಲ್ವರ್ಗದ ಬಹುಪಾಲು ವಚನಕಾರರಿಗೂ ಇರುವ ಅಂತರ ಅವರ ಈ ಅಭಿವ್ಯಕ್ತಿ ಭಿನ್ನತೆಯಲ್ಲಿ ಎದ್ದು ಕಾಣುವ ಗುಣ. ಈ ಗುಣ ಅನುಭವ ವಿಶೇಷತೆಯ ಜೊತೆಗೆ ಅವರ ಆಚರಣಾ ಮಾರ್ಗದ ದೃಷ್ಟಿಭಿನ್ನತೆಯನ್ನೂ ಒಳಗೊಂಡಂತೆ ಹರಿಯುತ್ತದೆ. ಈ ದೃಷ್ಟಿಭಿನ್ನತೆ ಅವರೊಳಗೆ ಮೊರೆಯುತ್ತಿದ್ದ ವರ್ಗ ಸೂಕ್ಷ್ಮಗಳನ್ನು ನಿಚ್ಚಳವಾಗಿ ಕಾಣಿಸುತ್ತಿದೆ.

ಕಲ್ಲನಾಗರ ಕಂಡರೆ ಹಾಲನೆರೆಯುವರಯ್ಯಾ,
ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯಾ,
ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯಾ,
ಉಂಬ ಜಂಗಮ ಬಂದಡೆ ನಡ ನಡೆಯೆಂಬರಯ್ಯಾ,
ನಮ್ಮ ಕೂಡಲ ಸಂಗನ ಶರಣರ ಕಂಡು
ಉದಾಸೀನ ಮಾಡಿದರೆ
ಕಲ್ಲತಾಗಿದ ಮಿಟ್ಟೆಯಂತಪ್ಪರಯ್ಯಾ.

ಬಂಡಿಯ ತುಂಬಿ ಪತ್ರೆಯ ತಂದು
ಕಂಡ ಕಂಡಲ್ಲಿ ಮಜ್ಜನಕ್ಕೆರೆವಿರಿ
ತಾಪತ್ರಯವ ಕಳೆದು ಪೂಜಿಸಿ
ತಾಪತ್ರಯವ ಲಿಂಗನೊಲ್ಲ
ಕೂಡಲ ಸಂಗಮ ದೇವ ಬರಿಯ ಎಡಕದಲ್ಲಿ ನೆನೆವನೆ.

ಜಡದ ಪೂಜೆಯಲ್ಲಿ ತೊಡಗಿ ಜೀವದ ಬದುಕನ್ನು ಕೊಲ್ಲುವ ಮೂಢ ಜನರ ನಡತೆಯನ್ನು ಹೀಯಾಳಿಸುತ್ತಿದೆ ಮೊದಲ ವಚನ. ಕಲ್ಲ ನಾಗರಿಗೆ ಹಾಲನೆರೆಯುವುದು ಉಣದ ಲಿಂಗಕ್ಕೆ ಬೋನವ ಹಿಡಿಯುವುದು ಎರಡೂ ವ್ಯರ್ಥ ಹಾಗೂ ದಡ್ಡಕ್ರಿಯೆ ಎಂಬುದನ್ನು ಹೇಳುತ್ತಲೇ ಶರಣರನ್ನು ಕಂಡು ಉದಾಸೀನ ಮಾಡುವುದು ತಪ್ಪು. ಹಾಗೆ ಉದಾಸೀನ ಮಾಡಿದರೆ ಕಲ್ಲತಾಗಿದ ಮಣ್ಣ ಹೆಂಟೆಯಂತಾಗುತ್ತಾರೆ ಎಂದು ಎಚ್ಚರಿಸುತ್ತಾನೆ ಬಸವಣ್ಣ. ಇಲ್ಲಿ ಜಡಪೂಜೆಯನ್ನು ಜರಿಯುತ್ತಾ ಜಂಗಮ ಸೇವೆಯನ್ನು ಪ್ರತಿಪಾದಿಸುವ ಭಾವ ಎದ್ದು ಕಾಣುತ್ತದೆ. ಭಾವದಲ್ಲಿ ವ್ಯಂಗ್ಯಕ್ಕಿಂತ ಅನುಬೋಧನೆ ಇದೆ. ಈ ಅನುಬೋಧನೆ ಎಚ್ಚರಿಕೆಯ ಉದ್ದೇಶಿತ ಪರಿಣಾಮದಲ್ಲಿ ಕೊನೆ ಮುಟ್ಟುತ್ತದೆ. ವಚನದ ಪೂರ್ಣ ಅವಧಾರಣೆ ಇರುವುದು ಜೀವದ ಕಡೆಗೆ ಜಂಗಮದ ಕಡೆಗೆ; ದಿಟ ನಾಗರನ್ನು ಕೊಲ್ಲುವ ಜಂಗಮಕ್ಕೆ ನಡೆ ನಡೆ ಎಂಬುವ ಶರಣರನ್ನು ಉದಾಸೀನ ಮಾಡುವ ಪ್ರವೃತಿಯನ್ನು ವಿರೋಧಿಸುವ ಕಡೆಗೆ. ಇನ್ನು ಎರಡನೇ ವಚನದಲ್ಲಿ, ಪತ್ರೆ ಮತ್ತು ಮಜ್ಜನಗಳು ಸಾರ್ಥಕವಾಗದಿರುವುದು ತಾಪತ್ರಯವನ್ನು ಕಳೆದುಕೊಳ್ಳದಿರುವುದರಿಂದ. ಬಾಹ್ಯಸಾಮಗ್ರಿ ಮತ್ತು ಡಾಂಭಿಕ ನಡತೆಯಿಂದ ಶಿವನೊಲಿಯುವುದಿಲ್ಲ ಎಂಬುದನ್ನು ಈ ವಚನ ಸಾರುತ್ತಿದೆ. ಬಸವಣ್ಣನ ಈ ಎರಡೂ ವಚನಗಳು ಭಕ್ತನ ನಡೆಯನ್ನು ಅಂತರ್ಮುಖಿಯಾಗಿಸಿ ಆತ್ಮವಿಮರ್ಶೆಯ ಕಡೆಗೆ ತಿರುಗಿಸುತ್ತವೆ. ಶರಣರನ್ನು ಉದಾಸೀನ ಮಾಡಬಾರದು ಎನ್ನುವ ಎಚ್ಚರದಲ್ಲಿ ಸಮಷ್ಟಿಯ ದನಿ ಕೇಳಿದರೂ ಪತ್ರೆ ಹಾಲು ಬೋನಗಳ

ನೆಲೆಯ ಪರಿಣಾಮದಲ್ಲಿ ಇಲ್ಲಿಯ ದನಿ ಪ್ರಧಾನವಾಗಿ ಹರಿಯುವುದು ವ್ಯಕ್ತಿ ಮತ್ತು ವಿಚಾರದ ಕಡೆಗೇ.

ಅಂಬಿಗರ ಚೌಡಯ್ಯ ಕಲ್ಲು ದೇವರ ಪೂಜೆ ಮಾಡುವವರನ್ನು ನಿಷ್ಠುರವಾದ ಮಾತುಗಳಿಂದ ಝಂಕಿಸುತ್ತಾನೆ.

ಕಲ್ಲು ದೇವರ ಪೂಜೆಯ ಮಾಡಿ
ಕಲಿಯುಗದ ಕತ್ತೆಗಳಾಗಿ ಹುಟ್ಟಿದರು
ಮಣ್ಣ ದೇವರ ಪೂಜಿಸಿ ಮಾನಹೀನರಾದರು
ಮರನ ದೇವರೆಂದು ಪೂಜಿಸಿ ಸ್ವರ್ಗಕ್ಕೇರದೇ ಹೋದರು
ಜಗದ್ಭರಿತವಾದ ಪರಶಿವನೊಳಗೆ ಕಿಂಕರನಾದ
ಶಿವಭಕ್ತನೆ ಶ್ರೇಷ್ಠನೆಂದಾತ ನಮ್ಮ ಅಂಬಿಗರ
ಚೌಡಯ್ಯನು.

ಕಲ್ಲು ಮಣ್ಣು ಮರಗಳನ್ನು ದೇವರ ಪ್ರತೀಕವಾಗಿಸಿಕೊಂಡು ಪೂಜಿಸುವುದು ಎಂದಿನಿಂದಲೂ ಇರುವ ರೂಢಿ. ಈ ರೂಢಿಯನ್ನು ಹಲವು ಜನ ವಚನಕಾರರು ಟೀಕಿಸಿದ್ದಾರೆ. ಆದರೆ ಚೌಡಯ್ಯನ ವಚನಗಳಲ್ಲಿ ಈ ಟೀಕೆ ತುಂಬಾ ಹರಿತವಾಗಿದೆ. ಅಲ್ಲದೆ ಈ ಟೀಕೆ ಕೇವಲ ಬಾಯಿ ಮಾತಿನ ಟೀಕೆಯಾಗದೆ ವೈಚಾರಿಕ ಅಂಶದ ಕಡೆಗೆ ಬೇರು ಚಾಚಿರುವ ಆಲೋಚನಾ ಎಳೆಯಿಂದ ಕೂಡಿದೆ. ಜಗದ್ಭರಿತನಾದ ಪರಶಿವನಲ್ಲಿ ಕಿಂಕರನಾಗುವುದೆಂದರೆ ಬದುಕಿನಲ್ಲಿ ತೊಡಗಿಕೊಳ್ಳುವುದು; ಕಾಯಕ ಜೀವಿಯಾಗುವುದು. ಪರಶಿವನ ಜಗದ್ಭರಿತ ಭಾವಕ್ಕೂ ಅಣುರೇಣು ತೃಣಕಾಷ್ಠಗಳಲ್ಲಿ ನೀನಿಪ್ಪೆ ಎಂಬ ಅರಿವಿಗೂ ಇರುವ ಅರ್ಥಸಮಾನತೆಯನ್ನು ಗ್ರಹಿಸಿದಾಗ ಜಗದ್ಭರಿತ ಪದದ ಅರ್ಥ ಬಾಹುಳ್ಯ ಅರಿವಾಗುತ್ತದೆ. ಬದುಕಿನ ಸರ್ವವ್ಯಾಪೀ ಶಕ್ತಿ ಆ ಪರಶಿವ ಭಾವ ಎಂಬುದು ಚೌಡಯ್ಯನ ಅರಿವು. ಪರಶಿವ ಜಗತ್ತನ್ನು ತುಂಬಿ ಕೊಂಡವನು ಎಂಬ ಅರಿವಿನಲ್ಲಿ ನಿಸರ್ಗ ಮತ್ತು ಬದುಕಿನ ಅಖಂಡತ್ವ

ಗಳೇ ಹೊಳೆಯುತ್ತವೆ. ಇವುಗಳಿಗೆ ಕಿಂಕರನಾಗುವುದೆಂದರೆ ಇವಗಳಿಗೆ ವಿರುದ್ಧವಾಗದಂತೆ ನಡೆದುಕೊಳ್ಳುವುದು, ಬದುಕಿಗೆ ಮುಖವಾಗುವುದು, ಜೀವಪರವಾಗುವುದು. ಇಂಥ ಬಾಳನ್ನು ನಡೆಸುವಾತ ಮನುಷ್ಯಶ್ರೇಷ್ಠನಾಗುತ್ತಾನೆ. ಇದು ಅಂಬಿಗರ ಚೌಡಯ್ಯ ತನ್ನ ವಚನಗಳಲ್ಲಿ ವ್ಯಂಜಿಸುವ ಬಾಳಿನ ನೋಟ.

ಉದಯದಲೆದ್ದು ಪತ್ರೆ ಪುಷ್ಪಗಳಿಗೆ ಹೋಗುವ
ಅಣ್ಣಗಳಿರಾ ನೀವು ಕೇಳಿರೋ
ಹಸಿಯ ತೊಪ್ಪಲನೆ ತಂದು
ಆ ದೇವರ ಮಸ್ತಕದ ಮೇಲೊಟ್ಟುವ
ಆ ತೊಪ್ಪಲನೆ ತಂದು ಬಿಸಿ ಮಾಡಿ
ಪಶುಪತಿ ಎಂಬ ಜಂಗಮಕ್ಕೆ ನೀಡಿದೊಡೆ
ಆ ಜಂಗಮದ ಬಸಿರು ತುಂಬಿದೊಡೆ
ಲಿಂಗದ ಹಸಿವಡಗಿತೆಂದಾತ ನಮ್ಮ ಅಂಬಿಗ ಚೌಡಯ್ಯ

ಹಸಿಯ ತೊಪ್ಪಲನ್ನು ಪುಸ್ತಕದ ಮೇಲೊಟ್ಟಿ ಕಸವಾಗಿಸುವ ಕ್ರಿಯೆಯನ್ನು ಚೌಡಯ್ಯ ತಿರಸ್ಕರಿಸುತ್ತಾನೆ. 'ಆ ದೇವರ ಮಸ್ತಕದ ಮೇಲೊಟ್ಟುವ ಆ ತೊಪ್ಪಲನೆ ತಂದು ಬಿಸಿಮಾಡಿ'–ಎಂಬಲ್ಲಿ ಕಸವಾಗಿಸುವುದನ್ನು ರಸವಾಗಿಸುವ, ವ್ಯರ್ಥವಾಗುವುದನ್ನು ಉಪಯೋಗ ಮಾಡಿಕೊಳ್ಳುವ ಕಡೆಗೆ ಈ ವಚನದ ಅವಧಾರಣೆ ಇದೆ. ಕಾಯಕ ಜೀವಿಯಾದ ಚೌಡಯ್ಯನಿಗೆ ಸಮಯ–ಸಾಮಗ್ರಿ ಎರಡೂ ಅಮೂಲ್ಯ. ಅವು ಹಾಳಾಗುವುದಕ್ಕೆ ಹಸಿವಿನ ಲೋಕದ ಅವನ ಅಂತಃಕರಣ ಒಪ್ಪುವುದಿಲ್ಲ. 'ಮಸ್ತಕದ ಮೇಲೊಟ್ಟುವ'- ಎಂಬಲ್ಲಿ ಅವು ವ್ಯರ್ಥವಾಗುವುದನ್ನು ಹೇಳುತ್ತಲೇ ಆ ರೀತಿಯ ಪೂಜಾವಿಧಿಯನ್ನೂ ವಿಡಂಬಿಸುತ್ತಿದ್ದಾನೆ. ಇಲ್ಲಿ ನೀಡಬೇಕಾಗಿರುವುದು ಪಶುಪತಿ ಎಂಬ ಜಂಗಮಕ್ಕೆ. ಬಸವಣ್ಣನ ವಚನದಲ್ಲಿ ಬರುವ 'ಕೂಡಲ ಸಂಗನ ಶರಣರು' ಎಂಬ ವಿಶೇಷಣ

ಸೂಚಿಗೂ ಇಲ್ಲಿನ 'ಪಶುಪತಿ ಎಂಬ ಜಂಗಮ' ಎನ್ನುವ ಸಂಬೋಧನೆಗೂ ಇರುವ ಅರ್ಥವ್ಯತ್ಯಾಸ ಗಮನಾರ್ಹವಾದುದು. ಪಶುಪತಿ ಎಂಬ ಜಂಗಮ ಪಶುಪಾಲನೆಯ ಕ್ರಮಿಕ ನೆಲೆಯ ಕಡೆಗೆ ಕರುಳು ತುಡಿದಂತೆ ಮೂಡಿದ ಭಾವವಿಶೇಷಣವಾಗಿದೆ. ಹಾಲನೆರೆಯುವ ಬೋನ ಹಿಡಿಯುವ ವ್ಯರ್ಥ ಕರ್ಮದ ಮೇಲೆ ಬಸವಣ್ಣನವರ ಕಣ್ಣು ಪ್ರಧಾನವಾಗಿ ಹರಿದರೆ, ಅದಕ್ಕೂ ಮೂಲದ ಪತ್ರೆ ಬಳಕೆಯಲ್ಲೇ ಅನ್ನವನ್ನು ಕಾಣುವ ಹಸಿವಿನ ಲೋಕದ ಕಣ್ಣು ಈ ಅಂಬಿಗನ ಕಣ್ಣು. ವ್ಯಕ್ತಿ, ವಿಚಾರ ಮತ್ತು ಸಮಷ್ಟಿ ಇವು ಮೂರೂ ಮುಪ್ಪುರಿಗೊಂಡ ದನಿ ಈ ಅಂಬಿಗನ ದನಿ.

ಹೊಡೆವಡಲೇಕೆ ಹಿಡಿದು ಪೂಜಿಸಲೇಕೆ
ಎಡೆಯಾಡಲೇಕೆ ದೇಗುಲಕ್ಕಯ್ಯಾ ?
ಬಡಪರಂಥಕರಿಗೆ ಒಡಲಿಗನ್ನವನಿಕ್ಕಿದಡೆ
ಹೊಡವಂಟನಾತ ಮೂರು ಲೋಕಕ್ಕೆ
ಇದೇ ಬಡವರಂಥಕರಿಗೆ ಒಡಲಿಗನ್ನವನಿಕ್ಕದಿದ್ದಡೆ
ಹೊಡೆವಡಲಿಕೆ ಹುರುಳಿಲ್ಲವೆಂದನಂಬಿಗ ಚೌಡಯ್ಯ.

ರೊಟ್ಟಿ ಎಂಬುವುದೇ ಚೌಗಟಿ
ಹುಣಸಿನಕಾಯಿ ಎಂಬುದೇ ತೀರ್ಥಗಿಂಡಿ
ಬದನೆಕಾಯಿ ಎಂಬುವುದೆ ಲಿಂಗ
ಹರಕಾಗಲಿ ಮುರುಕಾಗಲಿ ಎಣ್ಣೆ ಹೋಳಿಗೆಯೆ ಲೇಸು
ಕುರುಡಿಯಾಗಲಿ ಕುಂಟಿಯಾಗಲಿ ಮನೆಯ ಹೆಂಡತಿಯೆ ಲೇಸು
ಉದುರು ಅನ್ನ ತುಪ್ಪ ತಟತಟಗು ಸಾರು
ತೃಷಾತುರಿಯೊಂದ ನಮ್ಮ ವೀರ ಅಂಬಿಗರ ಚೌಡಯ್ಯ.

ಮೇಲಿನ ಎರಡೂ ವಚನಗಳಲ್ಲಿ ಅನ್ನದ ಮಹತ್ವವನ್ನು ಕುರಿತ ಅಭಿಪ್ರಾಯ ನೇರವಾಗಿ ಪ್ರಭಾವಿಯಾಗಿ ಅಭಿವ್ಯಕ್ತಗೊಂಡಿದೆ. ಪೂಜೆ ಮಾಡುವ ಕ್ರಿಯೆ ಬೂಟಾಟಿಕೆಯಾಗದೆ ಸಂಸ್ಕೃತಿಯ ಸಲ್ಲಕ್ಷಣವಾಗುವುದು ಮಾನವೀಯ ಕರುಳ ತುಡಿತ ಮಿಡಿತಗಳ ಕ್ರಿಯಾಶೀಲ ನೆಲೆಯಿಂದ ಮೂಡಿದಾಗ. ಮಾತಿನಲ್ಲಿ ಬೆಣ್ಣೆ ಕಂಕುಳಲ್ಲಿ ದೊಣ್ಣೆ ಎನ್ನುವ ಹಾಗೆ ಪೂಜೆಯಲ್ಲಿ ಗೌರವ ಓಜೆಯಲ್ಲಿ ನಿರ್ದಯಿಯಾದರೆ ಆ ಪೂಜೆ ಹೆಣಕ್ಕೆ ಮಾಡಿದ ಸಿಂಗಾರ. ಹಸಿದವರಿಗೆ ಅನ್ನವನಿಕ್ಕದ ಧರ್ಮಾಚರಣೆ ಅಯೋಗ್ಯ ನಡಾವಳಿ. ಅಂತೆಯೇ ಹೊಡೆವಡಲಿಕೆ ಹುರುಳಿಲ್ಲ ಎನ್ನುತ್ತಾನೆ ಚೌಡಯ್ಯ. ಬಡವರ ಭಕ್ಷ್ಯಗಳನ್ನು ಪೂಜಾಸಾಮಗ್ರಿಗಳಿಗೆ ಹೋಲಿಸಿ ತನ್ನ ತೃಷಾತುರತೆಯನ್ನು ಮೆರೆದಿರುವ ಅಂಬಿಗನ ಭಾವ ಹಸಿವಿನ ಲೋಕದ ಕರುಳನಾದ. ಅನ್ನ ದೈವಕ್ಕಿಂತ ಇನ್ನು ದೈವವದುಂಟೆ ? ಈ ಕಾರಣದಿಂದಲೆ ಮಿಕ್ಕಿನ ದೈವಗಳನ್ನು ಲೆಕ್ಕಕ್ಕಿಟ್ಟುಕೊಳ್ಳದಂತೆ ತನ್ನ ಅಂತರಂಗದ ನಿಷ್ಠುರ ಸತ್ಯವನ್ನು ಸಾರುತ್ತಾನೆ.

ಮಾಯೆಯ ಬಸುರಲ್ಲಿ ಬಂದಾತ ಮಹೇಶ
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ
ಮರುತದೇವಿಯ ಬಸುರಲ್ಲಿ ಬಂದಾತ ಹಾರುವ
ಇವರು ದೇವರೆಂದು ನಂಬಿ ಪೂಜಿಸಿದಡೆ ಭವ ಅಳಿಯದು
ಮುಕ್ತಿಯಾಗದೆಂದಾತನಂಬಿಗ ಚೌಡಯ್ಯ.

ತ್ರಿಮೂರ್ತಿಗಳ ಜೊತೆಗೆ ಭೂದೇವತೆ ಬ್ರಾಹ್ಮಣನನ್ನೂ ಕೂಡಿಸಿ ಇವರನ್ನು ದೇವರೆಂದು ನಂಬುವ ನಂಬಿಕೆ ಮೂಲವನ್ನೇ ತಿರಸ್ಕರಿಸುತ್ತಾನೆ ಅಂಬಿಗರ ಚೌಡಯ್ಯ. ಚೌಡಯ್ಯನ ಪ್ರಕಾರ ಇಷ್ಟಲಿಂಗವೆಂದರೆ ಇಷ್ಟದೈವವಲ್ಲ, ದೈವೀಭಾವದಲ್ಲಿ ಕಾಯಕಮುಖಿಯಾದ

ಮನಸ್ಸು; ಅಂಗದ ಮೇಲಿನ ಲಿಂಗವಲ್ಲ, ದೇಹದೊಳಗಿನ ಜೀವಭಾವ. ಈ ಜೀವಭಾವ ಪಡೆಯಬೇಕಾದ್ದು ದೈವೀಗುಣ ಸ್ವರೂಪವನ್ನು. ಹೀಗಾಗಿ ಉಣಲಿಕ್ಕೆ ಸಂತೋಷಪಡುವ ಮನಸ್ಸನ್ನು ಮನಸ್ಸಿನ ತೃಪ್ತಿಯನ್ನು ನಿಜವಾದ ಪೂಜೆ, ಲಿಂಗದ ಹಸಿವನ್ನಡಗಿಸಿದ ಪೂಜೆ ಎನ್ನುತ್ತಾನೆ. ಹೀಗಾಗದೆಹೋದ ಪೂಜೆ ಡಾಂಭಿಕ ಪೂಜೆ. ಅಂಥ ಡಾಂಭಿಕ ನೈವೇದ್ಯವನ್ನು ಅಂಥ ಪೂಜೆ ಮಾಡಿದ ಪೂಜೆಯಲ್ಲಿ ಬಳಸಿದ ಭಕ್ತನನ್ನು ಹೀಯಾಳಿಸುತ್ತಾನೆ.

ಶರಣ ಸತಿ ಲಿಂಗಪತಿ–ಎಂಬ ಭಾವದ ಭಕ್ತಿ ವಚನಕಾರರಲ್ಲಿ ಬಹಳ ಹೆಸರಾದ ಭಕ್ತಿ ಮಾರ್ಗ. ಇದು ಅಕ್ಕನಿಂದ ಮೊದಲಾಗಿ ಹಲವರಲ್ಲಿ ಬೆಳೆದು 'ಮಧುರ ಭಾವದ ಭಕ್ತಿ'–ಎಂದು ಕೊಂಡಾಟಕ್ಕೆ ಒಳಗಾಗಿದೆ. ಆದರೆ ಚೌಡಯ್ಯ ದ್ವೈತ ಭಾವದ ಇಂಥ ಭಕ್ತಿ ಪ್ರದರ್ಶನವನ್ನು ನಿಷ್ಠುರವಾಗಿ ಖಂಡಿಸುತ್ತಾನೆ.

ಶರಣ ಸತಿ ಲಿಂಗ ಪತಿ ಎಂಬರು
ಶರಣ ಹೆಣ್ಣಾದ ಪರಿಯಿನ್ನೆಂತು ?
ಲಿಂಗ ಗಂಡಾದ ಪರಿಯಿನ್ನೆಂತು ?
ನೀರು ನೀರ ಕೂಡಿ ಬೆರೆದಲ್ಲಿ ಭೇದಿಸಿ ಬೇರೆ ಮಾಡಬಹುದೆ ?
ಗಂಡು ಹೆಣ್ಣು ಸಂಯೋಗವಾದಲ್ಲಿ
ಆತುರ ಹಿಂಗಿ ಘಟ ಬೇರಾಯಿತು
ಶರಣಸತಿ ಲಿಂಗಪತಿ ಎಂಬ ಮಾತು ಮೊದಲಿಗೆ ಮೋಸ
ಲಾಭಕ್ಕಧೀನವುಂಟೆ ? ಎಂದನಂಬಿಗ ಚೌಡಯ್ಯ.

ಕಾಯಕವನ್ನು ಪೂಜೆ ಎಂದು, ಆತ್ಮತೃಪ್ತಿಯ ಬದುಕನ್ನು ದೇವರ ಸಾಕ್ಷಾತ್ಕಾರ ಎಂದು ಭಾವಿಸಿದ ಚಿಂತಿಸಿದ ಬದುಕಿದ ಇವನಿಗೆ ಸಹಜವಾಗಿ ದೈವತ್ವವೆಂದರೆ ಭಕ್ತನಾದವನು ಪಡೆದುಕೊಳ್ಳುವ ಪೂರ್ಣತ್ವ.

ಇದು ಬೆರಸಿ ಭೇದಿಸಲರಿಯದ ಭಾವದ್ದು. ಹಾಗೆಂದೇ ನೀರು ನೀರ ಕೂಡಿ ಬೆರೆದಲ್ಲಿ ಭೇದಿಸಿ ಬೇರೆ ಮಾಡಬಹುದೇ ? ಎನ್ನುತ್ತಾನೆ. ಶರಣ ಸತಿಯಾಗಿ ಲಿಂಗಪತಿಯಾಗಿ ಕೂಡಿದಾಗ ಕೂಡಿದ ಆತುರ ಕಳೆದ ಮೇಲೆ ದೇಹ ಬೇರೆ ಆಗಲೇ ಬೇಕಲ್ಲ ? ಚೌಡಯ್ಯನ ಸತ್ಯಾನ್ವೇಷಕ ನಿಷ್ಠುರ ದೃಷ್ಟಿ ದ್ವೈತದ ನೆಲೆಯ ಮೋಸ ವಂಚನೆಯನ್ನು ನೇರವಾಗಿ, ಉಗ್ರವಾಗಿ ಬಯಲಿಗೆಳೆಯುತ್ತಿದೆ. ಭಾಷೆಯ ನೆಲೆಯ ಅಮೂರ್ತ ಆಧ್ಯಾತ್ಮಗಳಿಗಿಂತ ನಡೆಯ ನೆಲೆಯ ಮೂರ್ತ ಬದುಕು ಮುಖ್ಯ. ಇದರ ಕಡೆಗೆ ಅಂದರೆ ಬದುಕು ಹಸನಾಗುವುದರ ಕಡೆಗೆ ಇವನ ಆಲೋಚನೆ ಮತ್ತು ಭಾವನೆಗಳು ಹರಿದಿವೆ. ಈ ಭಾವನೆ ಆಲೋಚನೆಗಳಿಗೆ ತಕ್ಕ ಮೈಯಾಗಿ ಇವನ ಭಾಷೆ ಮಿಡಿದಿದೆ.

ಅನುಬಂಧ

ಅಂಬಿಗರ ಚೌಡಯ್ಯನ ಇನ್ನಷ್ಟು ಆಯ್ದ ವಚನಗಳು

ಬಹಳಷ್ಟು ವಚನಕಾರರ ವಚನಗಳ ಪ್ರಮಾಣವನ್ನು ಗಮನಿಸಿದಾಗ ಸಾಕಷ್ಟು ಪ್ರಕ್ಷಿಪ್ತಗಳಾಗಿರುವ ಅನುಮಾನ ಉಂಟಾಗುತ್ತದೆ. ಈ ಸಂದೇಹಕ್ಕೆ ಮುಖ್ಯ ಕಾರಣ–ಕೆಲವರ ವಚನಗಳನ್ನು ನಿರ್ದಿಷ್ಟವಾಗಿ ಗಮನಿಸಿದಾಗ, ಅಲ್ಲಿ ಆ ವಚನಕಾರ ತನಗೆ ತಾನೇ ಕಟ್ಟಿಕೊಂಡಂತೆ ಕಂಡು ಬರುವ ಭಾವನೆ–ಆಲೋಚನೆಗಳ ವೈರುಧ್ಯ. ಹೀಗಾಗಿ ಪ್ರತಿಯೊಬ್ಬ ವಚನಕಾರನ ವ್ಯಕ್ತಿತ್ವವನ್ನು ಅವನ ವಚನಗಳ ಮುಖೇನವೇ ಪರಿಶೋಧಿಸುವಾಗಲೂ ಸಾವಿರದ ಕಣ್ಣಿನ ಎಚ್ಚರ ಅಗತ್ಯ.

ವಚನಗಳು

ಅಂಗದೊಳಗಿಪ್ಪುದು ಲಿಂಗವಲ್ಲ
ಅಂಗದ ಹೊರಗಿಪ್ಪುದು ಲಿಂಗವಲ್ಲ
ಎಲ್ಲ ಅಂಗಗಳನೊಳಕೊಂಡಿಪ್ಪ ಲಿಂಗ
ಹೋಗುತ್ತ ಬರುತ್ತ ಇಹುದಲ್ಲ
ಚಲನೆಯಿಲ್ಲದ ಅಚಲವಪ್ಪ ಲಿಂಗಕ್ಕೆ
ಹೋಯಿತ್ತು ಇದ್ದಿತ್ತೆಂಬ
ಸಂದೇಹವಿಲ್ಲೆಂದನಂಬಿಗ ಚೌಡಯ್ಯ ೧

ಅಂದಾದಿ ಬಿಂದುವಿನೊಳೊಂದಿದ ಹುಟ್ಟನು
ಆ ಹುಟ್ಟನೆ ಹಿಡಿದು ಅಂದ ಚೆಂದದಲ್ಲಿ
ತೊಳಸಿ ಆಡುತ್ತೈದಾರೆ ಜಗವೆಲ್ಲಾ !
ಅಂದಗಟ್ಟವರೆಲ್ಲಾ ಬಂದೇರಿ ಹರಿಗೋಲ
ಒಂದೆ ಹುಟ್ಟಿನಲ್ಲಿಳುಹುವೆನೆಂದಾತನಂಬಿಗ ಚೌಡಯ್ಯ ೨

ಅಂಬಿನ ಹಿಳುಕಿನಲ್ಲಿ ಕಟ್ಟಿದ ವಿಹಂಗನ ಗರಿಯಂತೆ
ತಾಗುವ ಮೊನೆಗಾಧಾರವಾಗಿ
ದೂರ ಎಯ್ದುವುದಕೆ ಸಾಗಿಸುವ ಗುಣತಾನಾಗಿ
ಕ್ರೀ ಅರಿವಿನ ಭೇದದ ನಿರಿಗೆಯು ಕಾಬನ್ನಕ್ಕ
ಅರಿವು ಕುರುಹು ಎರಡೂ ಬೇಕೆಂದನಂಬಿಗ
ಚೌಡಯ್ಯ ೩

ಅಗ್ನಿ ದಿಟವೆಂದಡೆ ತಾ ಹುಸಿ
ಕಾಷ್ಠವಿಲ್ಲದೆ ಕಾಷ್ಠದಲ್ಲಿ ಅಡಗಿಕೊಂಡಿದ್ದ ಭೇದವನರಿತಡೆ
ಪ್ರಾಣ ಲಿಂಗಿಯೆಂದೆಂಬೆನೆಂದನಂಬಿಗ ಚೌಡಯ್ಯ ೪

ಅರ್ಚನೆಯ ಮಾಡುವಲ್ಲಿ ಆವೇಶ ಅರಿತಿರಬೇಕು
ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು
ಕೊಡುವ ಕೊಂಬಲ್ಲಿ ಸರ್ವಭೂತ ಹಿತನಾಗಿರಬೇಕು
ಇಂತೀ ಗುಣವ ಸಡಗರಿಸಿಕೊಂಡಿಪ್ಪಾತನ
ಅಡಿಗೆರಗುವೆನೆಂದನಂಬಿಗ ಚೌಡಯ್ಯ ೫

ಅಡವಿಯ ಪೊಗಿಸಿತ್ತು ; ಹುಡುಕು ನೀರಲ್ಲದ್ದಿತ್ತು.
ಜಡೆಗಟ್ಟಿ ಭಸ್ಮವ ತೊಡಿಸಿತ್ತು; ಉಡೆ ಉಚ್ಚಗೊಳಿಸಿತ್ತು.
ಹಿಡಿದೊತ್ತಿ ಕೇಶವ ಕೀಳಿಸಿತ್ತು : ಹುಡಿ ಹುಚ್ಚ
ಗೊಳಿಸಿತ್ತು
ಊರೊಳಗೆಲ್ಲ ಈ ಬೆಡಗಿನ ಮಾಂಜಿಯ
ಬಡಿಹಾರಿ ಸಮಯಿಗಳ ನುಡಿಗೆ
ನಾಚುವೆನೆಂದನಂಬಿಗ ಚೌಡಯ್ಯ ೬

ಅರಿಯದ ಗುರು ಅರಿಯದ ಶಿಷ್ಯ
ಇವರಿಬ್ಬರಿಗೇನಪ್ಪುದೋ ?
ಕುರುಡ ಕುರುಡನ ಕೈಪಿಡಿದು ಪಥವ ನಡೆಯಬಲ್ಲಡೆ
ತೊರೆಯಲದ್ದಿ ಹೋಹವನ ಈಸಲರಿಯದವ
ತೆಗೆದಂತಾಯಿತ್ತೆಂದನಂಬಿಗ ಚೌಡಯ್ಯ ೭

ಅರಿವನರಿವಲ್ಲಿ ತಾನೆನ್ನದೆ ಇದಿರೆನ್ನದೆ
ಮತ್ತೇನೂ ಉಳಿವನ ಸಂಪಾದಿಸದೆ
ಅರುಣನ ಕಿರಣಕೆ ಅರಸ ಸಾರದಂತೆ

ಕಾದ ಹೆಂಚಿನಲ್ಲಿ ನೀರಬಿಟ್ಟಂತೆ
ಬಧಿರನ ಕಾವ್ಯದಂತೆ ಚದುರನ ಒಳ್ಪಿನಂತೆ
ಕಲೆದೋರದೆ ನಿಂದಾತನ ಅಡಿಗೆರಗುವೆನೆಂದನಂಬಿಗ
ಚೌಡಯ್ಯ ೮

ಅರು ಹಿರಿಯರ ದೈವ ಅಗಲ ತಲೆಯಿಲ್ಲಾ ಎಂದಡೆ
ಹೊಲೆಯ ಬೊಮ್ಮಗ ತೊಗೆತುಪ್ಪವ ಬೇಡುವಂತೆ
ಬ್ರಹ್ಮ ವಿಷ್ಣುಗಳೆಂಬರಿನ್ನೂ ಕಾಣರು
ವೇದಂಗಳು ನಾಚದೆ ನುಡಿವ ಪರಿಯ ನೋಡಾ !
ಗಂಗೆವಾಳುಕ ಸಮರುದ್ರರು ಲಿಂಗವ ಕಂಡರೈಸೆ
ಸ್ವಯಂಭುವ ಕಾಣರೆಂದನಂಬಿಗ ಚೌಡಯ್ಯ ೯

ಆರಿಕೆ ಬಿತ್ತಿದ ಗಿಡುವಿನ ಹೂವ ಕೊಯ್ದು,
ಊರೆಲ್ಲರೂ ಕಟ್ಟಿಸಿದ ಕೆರೆಯ ನೀರು ತಂದು,
ನಾಡೆಲ್ಲರೂ ನೋಡಿ ಎಂದು ಪೂಜಿಸುತ್ತ,
ಪೂಜಿಸಿದ ಪುಣ್ಯ ಹೂವಿಗೊ ನೀರಿಗೊ
ನಾಡೆಲ್ಲಕೊ ಪೂಜಿಸಿದಾತಗೋ ?
ಇದ ನಾಸರಿಯೆ ನೀ ಹೇಳೆಂದನಂಬಿಗ ಚೌಡಯ್ಯ ೧೦

ಆರೂಢ ಜ್ಞಾನಿಯಾದವಂಗೆ ಅನುಭಾವವೇಕಯ್ಯ ?
ಮೀರಿದ ಸ್ಥಲದಲ್ಲಿ ನಿಂದವಂಗೆ ನೀರೇನು ನೆಲವೇನು ?
ಎಂದಾತನಂಬಿಗ ಚೌಡಯ್ಯ ೧೧

ಎಲೋ ಮಾನವ ಕೇಳೆಲೊ,
ಶೀಲ ಸಂಪನ್ನರಾದವರು ನೀವು ಕೇಳಿರೊ,
ಹಣ್ಣುಗಳು ಸಣ್ಣ ಜಾತಿಯ ಎಂಜಲು,

ಹಾಲು ಕರುವಿನ ಎಂಜಲು,
ಮೊಸರು ಗೊಲ್ಲತಿಯ ಎಂಜಲು
ಅಕ್ಕಿ ಬೇಳೆ ಬೆಲ್ಲಗಳು ನೊಣದ ಎಂಜಲು
ನೀರು ಮೀನು ಕಪ್ಪೆಗಳ ಎಂಜಲು,
ಉಪ್ಪು ಉಪ್ಪಾರನ ಎಂಜಲು ;
ಸಕಲ ಪದಾರ್ಥವು ಅನಂತ ಹುಳುಗಳ ಎಂಜಲು.
ಇಂತಹ ಎಂಜಲವು ಎಂದು ಕಣ್ಣಾರೆ ನೋಡಿ,
ಕಿವಿಯಿಂದಾರ ಕೇಳಿ
ಮಾಡುವ ದುರಾಚಾರ ಆರು ಬಣ್ಣಿಸಬಹುದು ?
ಅರಿವು ಇಲ್ಲದವರು ಅರಮನೆಗೆ ಮಾಡಿದರು
ಭಕ್ತಿ ಇಲ್ಲದವರು ತಮ್ಮ ಗುರುಲಿಂಗ ಜಂಗಮಕ್ಕೆ
ಮಾಡಿದರು.

ಇಂತಪ್ಪ ಸರ್ವರ ಎಂಜಲ ತಿಂದು
ಶಿವಲಿಂಗವ ಧರಿಸಿಕೊಂಡು ಶಿವಭಕ್ತರೆಂದು ಹೇಳಿಸಿ
ಕಾಲಿಗೆ ಬಂದಂತೆ ಕುಣಿದು, ಬಾಯಿಗೆ ಬಂದಂತೆ ಅಂದು
ಮನಬಂದಂತೆ ಸ್ತ್ರೀ ಸಂಗದಲ್ಲಿ ಆಚರಿಸುವ
ಭ್ರಷ್ಟ ಹೊಲೆಮಾದಿಗರಿಗೆ ಶೀಲವು ಎಲ್ಲಿಹುದು ?
ಆಚರಣೆ ಎಲ್ಲಿಹುದು ? ಕುಲವೆಲ್ಲಿಹುದು ?
ಇಂತಪ್ಪ ಮೂಳ ಹೊಲೆಯರ ಮೂಗ ಕೊಯ್ದು
ಪಡಿಹಾರಿ ಉತ್ತಣ್ಣಗಳ ಪಾದುಕದಿ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ. ೧೨

ಬಂದನರಿವು ಬಂದ ಮರೆದಿಹೆನೆಂಬ ಸಂದೇಹದವನಲ್ಲ
ಸರ್ವರ ಕೂಡಿಕೊಂಡು ಅರಿದಿಹೆನೆಂಬ ಬಂಧ
ಮೋಕ್ಷದವನಲ್ಲ

ಆಗಿಗೆ ಮುಯ್ಯಾಂತು, ಚೇಗೆಗೆ ಮನಗುಂದುವವನಲ್ಲ.
ಸುಖ ದುಃಖವೆಂಬ ಉಭಯವ ಸರಿಗಾಬವನಲ್ಲ
ನಿಂದ ನಿಜವೆ ತಾನಾಗಿದ್ದವಂಗೆ
ಬೇರೆ ಬಂಧನವೊಂದೂಯಿಲ್ಲ ಎಂದನಂಬಿಗ
ಚೌಡಯ್ಯ ೧೩

ಕಟ್ಟಿ ಕಳೆ ಪಾಪವ, ಬಿಟ್ಟುಕಳೆ ಪುಣ್ಯವ
ಒತ್ತು ರೋಷವ, ಸಮತೆಯ ಪಸರಿಸಾ
ಎತ್ತಿದರ್ಥವನು ಬಚ್ಚಿಟ್ಟು ಮನದಲ್ಲಿ
ಚೆಕ್ಕನೆ ತೀವು ಪರಿಣಾಮವನು
ಇದು ಬಟ್ಟೆ.
ದೇವತತ್ವವ ಮುಟ್ಟಲುಪದೇಶವ
ಕೊಟ್ಟನಂಬಿಗ ಚೌಡಯ್ಯ ತನ್ನನೊಲಿದವರಿಗೆ. ೧೪

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ
ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು
ಅಕ್ಕಿ ಕಣಕವ ಕೊಂಡು ಹೋಗುವ ಗುರುವ ಕಂಡಡೆ
ಕೆಡವಿ ಹಾಕಿ ಮೂಗನೆ ಕೊಯ್ದು
ಇಟ್ಟಂಗಿಯ ಕಲ್ಲಿಲೆ ತಿಕ್ಕಿ
ಸಾಸಿವೆಯ ಹಿಟ್ಟನೆ ತಳಿದು
ಮೇಲೆ ಲಿಂಬಿಯ ಹುಳಿಯನೆ ಹಿಂಡಿ
ಪಡುವಣ ಗಾಳಿಗೆ ಹಿಡಿಯೆಂದಾತ
ನಮ್ಮ ಅಂಬಿಗರ ಚೌಡಯ್ಯ. ೧೫

ಚಿತ್ರವ ಬರೆವ ಲೆಕ್ಕಣಿಕೆಯು ಕಟ್ಟಿಗೆಯಂತೆ
ನೋಡಿದಡೆ ರೋಮ ಹಲವಾಗಿ
ಬರೆವಡೆ ಕೂಡಿಹದಾರಿ ಒಂದೆಯಾಗಿ ತೋರುವಪೋಲು
ತನ್ನಿಚ್ಛೆಗೆ ಪ್ರಕೃತಿ ಹಲವಾಗಿ ವಸ್ತುವ ಮುಟ್ಟುವಲ್ಲಿ
ಏಕಚಿತ್ತವಾಗಿರಬೇಕೆಂದನಂಬಿಗ ಚೌಡಯ್ಯ. ೧೭

ಜಾತಿ ಭ್ರಮೆ ನೀತಿ ಭ್ರಮೆಯೆಂಬ ಕರ್ಮಂಗಳ
ಘಾತಿಸಿ ಮಾಡಿ ಕಳೆಯಬಲ್ಲಡಾತ ಯೋಗಿ
ಕ್ಷೇತ್ರ ಭ್ರಮೆ ತೀರ್ಥಭ್ರಮೆಯೆಂಬ ಕರ್ಮಂಗಳ
ನೀ ಕರಿಸಿ ಕಳೆಯ ಬಲ್ಲಡಾತ ಯೋಗಿ
ದೇಶಭ್ರಮೆ ಪಾಷಾಣ ಭ್ರಮೆಯೆಂಬ ಕರ್ಮಂಗಳ
ದೂಷಿಸಿ ಕಳೆಯಬಲ್ಲಡಾತ ಯೋಗಿ
ಲೋಕಕ್ಕಂಜಿ ಲೌಕಿಕವ ಮರೆಗೊಂಡು ನಡೆವಾತ
ಭೂತಯೋಗಿಯೆಂದಾತನಂಬಿಗ ಚೌಡಯ್ಯ. ೧೮

ತನ್ನುವ ಹುಸಿಮಾಡಿ ಇನ್ನೊಂದ ದಿಟ ಮಾಡುವ
ಅಣ್ಣಂಗೆ
ನಂಬುಗೆ ಇನ್ನಾವುದಯ್ಯಾ ?
ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ
ಪರಬ್ರಹ್ಮಕ್ಕೆ ತಲೆಯಿಕ್ಕಿ ತೆಗೆವನೆಂಬ ಅಣ್ಣ
ಗಾಪಿಲನೆಂದನಂಬಿಗ ಚೌಡಯ್ಯ. ೧೯

ನಾಲ್ಕು ವೇದವನೋದಿದ ನಂತರ ಮುಸಿಯಬೋನವ
ಶಿವಭಕ್ತರ ಮನೆಯುಚ್ಛಿಷ್ಟವ ನಾಯಿ ಮೂಸಿ
ನೋಡಲಾಗದು
ಸಾಮವೇದಿ ಹೋಗುತ್ತಿರಲು ಶ್ವಪಚಯ್ಯಗಳು

ತಮ್ಮ ಪಾದುಕದಿಂದ ಪಾಕವ ಮುಚ್ಚಿದರು.
'ಶ್ವಾನೋ ಶ್ರೇಷ್ಠ'ವೆಂದು ಇಕ್ಕಿದೆನು ಮುಂಡಿಗೆಯ
ಎತ್ತಿರೋ ಜಗದ ಸಂತೆಯ ಸೂಳೆಯ ಮಕ್ಕಳೆ
ಜಗಕ್ಕೆ ಪಿತನೊಬ್ಬನಲ್ಲದೆ ಇಬ್ಬರೆಂದು
ಬೊಗಳುವರ ಮೋರೆಯ ಮೇಲೆ
ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ
ನಿಜಶರಣನು. ೧೯

ಒರೆದು ಓದಿಸುವ ಆಕರಿಗಳೆಲ್ಲ ನೀವು ಕೇಳಿರೋ ;
ತರ್ಕ ವ್ಯಾಕರಣ ಛಂದಸ್ಸು ನಿಘಂಟು ವೇದ ಶಾಸ್ತ್ರವ
ನೋದಿ ಕೇಳಿ.
ಗಂಗೆಗೆ ಹರಿವವರನೇನೆಂಬೆ ?
ಪರವಧುವೆಂಬುದನರಿಯಿರಲ್ಲಾ !
ನೆರೆದಿರ್ದ ಪಾಪವ ಹೊನಲಿನಲ್ಲಿ ಕಳೆದೆನೆಂಬ
ಅಣ್ಣಗಳ ಬೆಡಗು ಬೇಡೆಂದಾತನಂಬಿಗ ಚೌಡಯ್ಯ. ೨೦

ಬೀಜ ಮೊಳೆವುದಲ್ಲದೆ ಮೊಳೆ ಮೊಳೆತುದುಂಟೆ ?
ಕ್ರೀಗೆ ಅರಿವಲ್ಲದೆ ಅರಿವಿಂಗೆ ಅರಿವುಂಟೆ ?
ಮೊಳೆ ಮೊಳೆತು ಪುನರಪಿ ಬೀಜವಾದಂತೆ,
ಅರಿವು ಕ್ರೀಯಲ್ಲಿ ನಿಂದು ಉಭಯವು ತಾನಾದ ತೆರದಂತೆ
ಎರಡರಲ್ಲಿ ಕೂಡಿದ ಉಳುಮೆಯನರಿಯಬೇಕೆಂದ
ನಂಬಿಗ ಚೌಡಯ್ಯ ೨೧

ಬೆಟ್ಟದ ಲಿಂಗವ ಹಿರಿದು ಪಾಡಿ ಕಂಡು ಪರಿವ
ಖೊಟ್ಟಿ ಮೂಳರಿರಾ, ಬಿಟ್ಟುಕೊಡಿ ನಿಮ್ಮ ಇಷ್ಟಲಿಂಗವ
ನಮ್ಮ ಕೈಗೆ ಕೊಡದಿದ್ದಡೆ,
ನಟ್ಟು ನಡುನೀರೊಳಗೊಯ್ದು, ಕಟ್ಟಿ ಮುಳುಗಿಸಿ

ನಿಮ್ಮನ್ನು ಲಿಂಗೈಕ್ಯರ ಮಾಡುವೆನೆಂದಾತ
ನಮ್ಮಂಬಿಗ ಚೌಡಯ್ಯ ೨೨

ಬೆಲ್ಲಕ್ಕೆ ಮಧುರ ರಸವಲ್ಲದೆ ಸಿಹಿಗೆ ಮಧುರ ರಸವುಂಟೆ ?
ಕಾಯಹಿಂಗೆ ಪೂಜೆಯಲ್ಲದೆ ಅರುಹಿಂಗೆ ಪೂಜೆಯುಂಟೆ ?
ಅರುಹು ಕರಗೊಂಡಲ್ಲಿ ಕ್ರಿಯೆ ಕುರುಹು
ಅಲ್ಲಿಯೇ ಲೋಪವೆಂದನಂಬಿಗ ಚೌಡಯ್ಯ. ೨೩

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಕೊರಳಿಗೆ ಕವಡೆಯ ಕಟ್ಟಿ
ನಾಯಾಗಿ ಬೊಗಳುವದು ಅದಾವ ವಿಚಾರವಯ್ಯಾ.
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಮಾರಿ ಬೆನ್ನಸಿಡಿ ಬಾಯಬೀಗದಲ್ಲಿ ಹೋಗುವದು
ಅದಾವ ವಿಚಾರವಯ್ಯಾ.
ಬೇವಿನ ಉಡುಗೆಯನುಟ್ಟು ಪಡಲಿಗೆಯ ಹೊತ್ತು
ಉಧೋ ಎಂಬುದು ಅದಾವ ವಿಚಾರವಯ್ಯಾ.
ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ
ಲಿಂಗಧಾರಣೆ ಮಾಡುವವನೊಬ್ಬ ಗುರುದ್ರೋಹಿ
ಅವರಿಗೆ ಚರಣೋದಕವ ಧರಿಸುವ
ವಿಭೂತಿ ರುದ್ರಾಕ್ಷಿಯ ಕೊಡುವನೊಬ್ಬ ಲಿಂಗದ್ರೋಹಿ
ಅವನು ಭಕ್ತನೆಂದು ಮನೆಯ ಹೊಕ್ಕು
ಮಂತ್ರವ ಹೇಳಿ ಅನ್ನವ ತಿಂಬುವನೊಬ್ಬ ಜಂಗಮ
ದ್ರೋಹಿ
ಇಂತೀ ನಾಲ್ವರಿಗೆ ಸೂರ್ಯ ಚಂದ್ರರುಳ್ಳನ್ನಕ್ಕ
ಎಕ್ಕಲ ಕುಂಡದಲ್ಲಿ ಇಕ್ಕದೆ ಮಾಣ್ಬನೆ
ನಮ್ಮ ಅಂಬಿಗ ಚೌಡಯ್ಯ. ೨೪


ಮರಬೇರು ಸಾರದಿಂದ ನಾನಾ ಶಾಖೆಗಳು
ಪಲ್ಲೈಸುವ ತೆರನಂತೆ
ಜೀವ ಭಾವ ಮೂಲದಿಂದ ಸಕಲೇಂದ್ರಿಯಂಗಳು
ಹೆಚ್ಚುಗೆ ಅಹಂತೆ,
ಮರಕ್ಕೆ ಬೇರು ನಷ್ಟದಿಂದ ಶಾಖೆ ನಷ್ಟ,
ಜೀವಕ್ಕೆ ಪ್ರಕೃತಿ ನಷ್ಟದಿಂದ ಇಂದ್ರಿಯ ನಷ್ಟ
ಎಂದನಂಬಿಗ ಚೌಡಯ್ಯ. ೨೫

ವಸ್ತುವ ಕಾಬರೆಲ್ಲರು
ಆತ್ಮ ಹಲವು ಬಗೆ ಎಂದಡೆ ಹಲವಾದುದುಂಟೆ ?
ಒಂದು ಕಂಭದ ನೀರು ಹಲವು ರಂಧ್ರಗಳಲ್ಲಿಳಿವುದು.
ಅದು ಕುಂಭದ ಭೇದವೋ ? ಜಲದ ಭೇದವೋ ?
ಈ ಉಭಯ ಭೇದವ ತಿಳಿದಲ್ಲಿ
ಆತ್ಮನೊಂದೆಯೆಂದನಂಬಿಗ ಚೌಡಯ್ಯ. ೨೬

ವಚನಾರ್ಥವ ಕಂಡಹರೆಂದು
ರಚನೆಯ ಮರೆಮಾಡಿ ನುಡಿಯಲೇತಕ್ಕೆ ?
ದಾರಿಯಲ್ಲಿ ಸರಕು ಮರೆಯಲ್ಲದೆ
ಮಾರುವಲ್ಲಿ ಮರೆಯುಂಟೆ ?
ತಾನರಿವಲ್ಲಿ ಮರೆಯಲ್ಲದೆ
ಬೋಧೆಗೆ ಮರೆಯಿಲ್ಲವೆಂದನಂಬಿಗ ಚೌಡಯ್ಯ. ೨೭

ವಿಹಗಂಗೆ ಗರಿಯಾಸೆಯೆಂದಡೆ
ಅದು ಸಂಚಾರವಿಲ್ಲದೆ ಚರಿಸಬಹುದೆ ?
ಅರವಿಂಗೆ ಕುರುಹಿನಾಸೆಯೆಂದಡೆ
ಆ ಅರಿವು ಕುರುಹಿನೊಳಗಾದ ಮತ್ತೆ

ಬೇರೊಂದು ಕುರುಹೆಂಬ ನಾಮವುಂಟೆ ?
ಚಿತ್ರದ ಬೊಂಬೆಗಳಿದ್ದ ಮನೆ ಕಿಚ್ಚೆದ್ದು ಬೇವಲ್ಲಿ
ಬೊಂಬೆಯು ಹೊತ್ತಿದ ಕಿಚ್ಚು ಚಿತ್ರವಾಗಿ ಉರಿವುದೆ ?
ನಿಶ್ಚಯವನರಿದ ನಿಜಾತ್ಮನು ಮತ್ತೆ
ಕತ್ತಲೆಯು ಹೊಗನೆಂದನಂಬಿಗ ಚೌಡಯ್ಯ. ೨೮


ಸಾಮಾಜಿಕ ಚಿಂತನ ಮಾಲೆ